ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
★ ದೇವರು ನಮ್ಮ ಗುರು ;
ಋಷಿಗಳು ನಮ್ಮ ಮಾರ್ಗದರ್ಶಿಗಳು

# ತಪೋವಾಣಿ

ಸಂಪುಟ 18 ಸಂಚಿಕೆ 07 ಜುಲೈ 2021 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಜುಲೈ 2011ರ ಸಂಚಿಕೆ)

ಋಷಿಗಳು ಉನ್ನತ ಲೋಕಗಳಿಂದ ನವ ಚೈತನ್ಯಗಳನ್ನು ಕೆಳಗೆ ತಂದು ಜಗತ್ತಿನೆಲ್ಲೆಡೆ ಹರಡುತ್ತಿದ್ದಾರೆ. ಪ್ರಪಂಚದ ಜ್ಯೋತಿ ಕಾರ್ಯಕರ್ತರೂ ನವ ಚೈತನ್ಯಗಳನ್ನು ಚಾನಲ್ ಮಾಡುತ್ತಿದ್ದಾರೆ. ನಾವು ಶಂಬಲ, ರಾ ದೇವರು ಹಾಗೂ ಫೋಟಾನ್ ಬೆಲ್ಟ್‌ನಿಂದ ಚೈತನ್ಯಗಳನ್ನು ಪಡೆಯುತ್ತಿದ್ದೇವೆ. ಈ ಚೈತನ್ಯಗಳು ಎಷ್ಟೇ ಬಲಿಷ್ಠವಾಗಿದ್ದರೂ, ಅವು ನಮ್ಮನ್ನು ನೇರವಾಗಿ ಪರಿವರ್ತಿಸಲಾರವು, ಏಕೆಂದರೆ ನಮ್ಮಲ್ಲಿ ಇಚ್ಛಾ ಸ್ವಾತಂತ್ರ್ಯವಿದೆ. ಚೈತನ್ಯಗಳು ನಮಗಾಗಿ ಬದಲಾವಣೆಯ ಅವಕಾಶಗಳನ್ನು ಸೃಷ್ಟಿಸುತ್ತವೆ ಮತ್ತು ಒದಗಿಸುತ್ತವೆ. ನಾವು ಆಯ್ಕೆ ಮಾಡಿಕೊಂಡರೆ ಅವು ನಮ್ಮ ಸಂಕಲ್ಪವನ್ನು ಬಲಪಡಿಸುತ್ತವೆ.

ಈ ದೇಶದ ಮತ್ತು ಪ್ರಪಂಚದಾದ್ಯಂತದ ಭ್ರಷ್ಟಾಚಾರ ಮತ್ತು ದಬ್ಬಾಳಿಕೆಯ ವ್ಯವಸ್ಥೆಗಳನ್ನು ಸರಿಪಡಿಸುವ ಹೋರಾಟಗಳಾಗುತ್ತಿರುವುದೇಕೆಂದರೆ, ಬದಲಾವಣೆಯ ಚೈತನ್ಯಗಳು ಒದಗಿಸಿರುವ ಅವಕಾಶಗಳನ್ನು ಜನರು ಬಳಸಿಕೊಳ್ಳುವ ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ ಅಧಿಕಾರದಲ್ಲಿರುವ ಜನರು ಬದಲಾಗದೆ ಉಳಿದಿದ್ದಾರೆ. ಈಗೇನಾಗುತ್ತದೆ? ಕ್ರಾಂತಿಗಳು ಏನಾಗುತ್ತವೆ? ಜನರ ಕನಸುಗಳು ಮತ್ತು ಆಕಾಂಕ್ಷೆಗಳು ಏನಾಗುತ್ತವೆ?

ಸಾಮಾನ್ಯ ಸಂದರ್ಭಗಳಲ್ಲಿ ಜನರ ಹೋರಾಟಗಳು ಸೋಲನ್ನು ಅನುಭವಿಸುತ್ತಿದ್ದವು ಹಾಗೂ ಭ್ರಷ್ಟ ಸರ್ವಾಧಿಕಾರಿ ವ್ಯವಸ್ಥೆಗಳು ತಮ್ಮ ಆಳ್ವಿಕೆಯನ್ನು ಮುಂದುವರೆಸುತ್ತಿದ್ದವು. ಆದರೆ ಕಾಲ ಬದಲಾಗುತ್ತಿದೆ. ನಾವು ಬೆಳಕಿನ ಯುಗದತ್ತ ಚಲಿಸುತ್ತಿದ್ದೇವೆ. ಭ್ರಷ್ಟಾಚಾರ, ಹಿಂಸೆ ಮತ್ತು ಅಸತ್ಯದ ಎಲ್ಲಾ ವ್ಯವಸ್ಥೆಗಳನ್ನು ಸಂದರ್ಭಗಳು ತಮ್ಮದೇ ಆದ ರೀತಿಯಲ್ಲಿ ಉರುಳಿಸಲಿವೆ. ಇನ್ನು ಮುಂದೆ, ಬದಲಾವಣೆ ಒಂದು ಆಯ್ಕೆಯಾಗಿರುವುದಿಲ್ಲ. ಅದೇ ನಿಯತಿಯಾಗಿರುತ್ತದೆ.

ನಮಗೆ ಸೂಕ್ಷ್ಮ ಲೋಕದೊಳಗೆ ಇಣುಕಿ ನೋಡಲು ಸಾಧ್ಯವಾಗಿದ್ದರೆ, ಈಗಾಗಲೇ ಬದಲಾವಣೆಗಳು ಸಂಭವಿಸಿಯಾಗಿದೆ ಎನ್ನುವುದನ್ನು ನೋಡಬಹುದಿತ್ತು. ಅವು ಭೌತ ಲೋಕದಲ್ಲಿ ಅಭಿವ್ಯಕ್ತವಾಗಬೇಕಿದೆಯಷ್ಟೆ. ಅದು ಎಂದಿಗೂ ಆಗಬಹುದು. ಇದು ಜಾಗತಿಕ ಮಟ್ಟದಲ್ಲಷ್ಟೇ ಅಲ್ಲ ವೈಯಕ್ತಿಕ ಮಟ್ಟದ ಘಟನೆಗಳ ಬಗ್ಗೆಯೂ ನಿಜ.

ಭ್ರಷ್ಟಾಚಾರದ ವಿರುದ್ಧದ ಹೋರಾಟವು ನಾಟಕ ಮತ್ತು ಅನರ್ಥಗಳಿಂದ ಮುಕ್ತವಾಗಿರುವುದಿಲ್ಲ. ವೈಯಕ್ತಿಕ ಆಸಕ್ತಿಗಳನ್ನು ಮುಂದಕ್ಕೆ ತರುತ್ತ, ಸ್ಪಷ್ಟ ವಿಧಾನವನ್ನು ಅಸ್ತವ್ಯಸ್ತಗೊಳಿಸುವುದರಿಂದ ವಾಹನ ನೆಗ್ಗಾಗಬಹುದು. ಆದರೆ ಬದಲಾವಣೆಯ ಚೈತನ್ಯಗಳು, ನಿಗದಿಪಡಿಸಿರುವ ಹಾದಿಯನ್ನು ಬೇರೆಡೆಗೆ ತಿರುಗಿಸಲಾಗುವುದಿಲ್ಲ. ಲೈಟ್ ಮಾಸ್ಟರ್‌ಗಳು ನಿರ್ಧರಿಸಿದ ದಿವ್ಯ ಕಾರ್ಯಕ್ರಮವನ್ನು ರದ್ದುಗೊಳಿಸಲಾಗುವುದಿಲ್ಲ. ಅದು ನಮ್ಮ ಭರವಸೆ.

ಅರ್ಧ ವರ್ಷ ಕಳೆದೇ ಹೋಯಿತು! ಈಗ, ಪ್ರತಿಯೊಬ್ಬರೂ ಸಮಯದ ವೇಗವನ್ನು ಗಮನಿಸುತ್ತಿದ್ದಾರೆ ಮತ್ತು ಅದರ ಬಗ್ಗೆ ಆಶ್ಚರ್ಯಪಡುತ್ತಿದ್ದಾರೆ. ಈ ವೇಗವನ್ನು ನಾವು ಹೇಗೆ ವಿವರಿಸಲು ಸಾಧ್ಯ! ಅದು ಅಸಾಧ್ಯ. ಆದರೆ ದಿನದ ಗಂಟೆಗಳನ್ನು ಸಂಕುಚಿತಗೊಳಿಸಲಾಗಿದೆ ಎನ್ನುವುದು ವಾಸ್ತವ. ಈ ಸಂಕೋಚನವು ದೀರ್ಘ ಕಾಲದವರೆಗೆ ಮುಂದುವರಿಯುತ್ತದೆ. ■

ಮಾನಸ ಫ಼ೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

ಕೋವಿಡ್ ಪರಿಸ್ಥಿತಿಯ ಕಾರಣದಿಂದಾಗಿ, ಬೆಂಗಳೂರು ನಗರದ ಕೇಂದ್ರಗಳಲ್ಲಿನ ಧ್ಯಾನದ ತರಗತಿಗಳನ್ನು ಮಾರ್ಚ್ 2021ರ ವರೆಗೆ ರದ್ದುಪಡಿಸಲಾಗಿತ್ತು. ಪಿಡುಗು ಇನ್ನೂ ನಿಂತಿಲ್ಲದಿರುವುದನ್ನು ಮತ್ತು ಪರಿಸ್ಥಿತಿಯು ಇನ್ನೂ ಪೂರ್ಣವಾಗಿ ನಿಯಂತ್ರಣದಲ್ಲಿ ಇಲ್ಲದಿರುವುದನ್ನು ಪರಿಗಣಿಸುತ್ತಾ ಮುಂದಿನ ಸೂಚನೆಯವರೆಗೆ ತರಗತಿಗಳನ್ನು ತೆರೆಯಲಾಗುವುದಿಲ್ಲ. ಪರಿಸ್ಥಿತಿಯನ್ನು ಗಮನಿಸುತ್ತಿರುತ್ತೇವೆ ಮತ್ತು ತರಗತಿಗಳನ್ನು ಯಾವಾಗ ಪುನರಾರಂಭಿಸಬೇಕೆನ್ನುವುದನ್ನು ನಿರ್ಧರಿಸುತ್ತೇವೆ.

ಅಲ್ಲಿಯವರೆಗೂ ವೆಬ್‌ಕಾಸ್ಟ್ ಮೂಲಕ ಭಾನುವಾರದ ತರಗತಿಗಳು ಆನ್‌ಲೈನ್‌ನಲ್ಲಿ ಮುಂದುವರಿಯುತ್ತವೆ. ಬೇಸಿಕ್ ತರಗತಿಗಳನ್ನು ಕೂಡ, ಪ್ರತಿ ಭಾನುವಾರ ಬೆಳಿಗ್ಗೆ 10 ರಿಂದ 11ರ ವರೆಗೆ 'ಆನ್‌ಲೈನ್'ನಲ್ಲಿ ನಡೆಸಲಾಗುತ್ತಿದೆ. ಪ್ರತಿ ತಿಂಗಳಿನ ಮೊದಲನೇ ಭಾನುವಾರ ಹೊಸ ಬ್ಯಾಚ್ ಪ್ರಾರಂಭವಾಗುತ್ತದೆ.

ಹಾಗೂ, ಪ್ರತಿ ತಿಂಗಳು 3ನೇ ಭಾನುವಾರ, ಮಾರ್ಗದರ್ಶಿತ ನೇರ ಆನ್‌ಲೈನ್ ಲೈಟ್ ಚಾನಲಿಂಗ್ ಸೆಷನ್ ನಡೆಸಲಾಗುತ್ತದೆ. ಇದು ಎಲ್ಲರಿಗೂ ತೆರೆದಿರುತ್ತದೆ. ಇದಕ್ಕಾಗಿ ಕೆಳಗಿನ ಲಿಂಕ್‌ಗಳನ್ನು ಬಳಸಿಕೊಳ್ಳಿ:

https://www.lightagemasters.com/lc_live
https://www.facebook.com/lightchannels
https://youtube.com/RevolutionByLight

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)
ಪ್ರಕಾಶ್‌ಮಾರ್ಗ್ (ಮರಾಠಿ)
ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/-ಡಿಡಿಯನ್ನು
**'Manasa Light Age Foundation'**
ಹೆಸರಿನಲ್ಲಿ ಕಳುಹಿಸಬೇಕು.
ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಗುರೂಜಿಯವರ 82ನೇ ಜನ್ಮೋತ್ಸವವನ್ನು 23ನೇ ಮೇ 2021ರಂದು ಆಚರಿಸಲಾಯಿತು

### ಸುದ್ದಿ-ಸೂಚನೆಗಳು

- ಪ್ರತಿ ಮೂರನೇ ಭಾನುವಾರದಂದು ಬೆಳಿಗ್ಗೆ 11 ಗಂಟೆಗೆ ಮಾರ್ಗದರ್ಶಿತ ಆನ್‌ಲೈನ್ ಲೈಟ್ ಚಾನೆಲಿಂಗ್ ಸೆಷನ್‌ಗಳನ್ನು ಲೈವ್ ವೆಬ್‌ಕಾಸ್ಟ್ ಮೂಲಕ ನಡೆಸಲಾಗುತ್ತಿದೆ. ಯಾರು ಬೇಕಾದರೂ ಆ ಸೆಷನ್‌ಗಳನ್ನು www.lightagemasters.com/lc ನಲ್ಲಿ ವೀಕ್ಷಿಸಬಹುದು. ಯಾವುದೇ ಲಾಗ್‌ಇನ್ ಅಗತ್ಯವಿಲ್ಲ. ಮುಂದಿನ ಸೆಷನ್ ಜುಲೈ 18ರಂದು ಇರುತ್ತದೆ. ಈ ಮಾಹಿತಿಯನ್ನು ನಿಮ್ಮ ಕುಟುಂಬದ ಇತರ ಸದಸ್ಯರೊಂದಿಗೆ ಹಾಗೂ ನಿಮ್ಮ ಸ್ನೇಹಿತರೊಂದಿಗೆ ದಯವಿಟ್ಟು ಹಂಚಿಕೊಳ್ಳಿ.
- Guruji Speaks Vol - I ಪುಸ್ತಕದ ಇ-ಪುಸ್ತಕ ಆವೃತ್ತಿಯನ್ನು, 23 ಮೇ 2021ರಂದು ಗುರೂಜಿಯವರ ಜನ್ಮ ದಿನೋತ್ಸವದ ಸಮಯದಲ್ಲಿ ಬಿಡುಗಡೆ ಮಾಡಲಾಯಿತು.

**ಜುಲೈ 10ರಂದು ಆರಂಭವಾಗುವ ಆಷಾಢ ಮಾಸದಲ್ಲಿ, ಅದ್ಭುತವಾದ ಚೈತನ್ಯಗಳು ನಮಗೆ ನೇರವಾಗಿ ಪರಬ್ರಹ್ಮ ಲೋಕದಿಂದ ದೊರಕುತ್ತವೆ. ಈ ತಿಂಗಳು ಪೂರ್ತಿ ನಾವು ಹೆಚ್ಚು ಧ್ಯಾನ ಮಾಡಬಹುದು ಮತ್ತು ಈ ಚೈತನ್ಯಗಳನ್ನು ಹೀರಿಕೊಳ್ಳಬಹುದು. ಈ ಚೈತನ್ಯಗಳು, 24-7-2021ರಂದು ಇರುವ ಗುರು ಪೂರ್ಣಿಮೆಯಂದು ಉತ್ತುಂಗಕ್ಕೇರುತ್ತವೆ. ಆ ದಿನ ನಿಮಗೆ ಸಾಧ್ಯವಾಗುವಷ್ಟೂ ಕಾಲ ಧ್ಯಾನ ಮಾಡಿ ಮತ್ತು ರಾತ್ರಿ ಮಲಗುವ ಮೊದಲು, ಮೇಲಿನಿಂದ ಬೆಳಕು ಬಂದು, ನಿಮ್ಮ ಇಡೀ ಶರೀರವನ್ನು ತುಂಬಿಕೊಂಡಂತೆ ಊಹಿಸಿಕೊಳ್ಳಿ, ಇದನ್ನು 7 ನಿಮಿಷಗಳ ಕಾಲ ಅಭ್ಯಾಸ ಮಾಡಿ. ಇಡೀ ರಾತ್ರಿ, ಈ ಚೈತನ್ಯಗಳನ್ನು ನಾವು ಪಡೆಯುತ್ತಿರುತ್ತೇವೆ.**

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ವೀಕ್ಷಿಸಲು ದಯವಿಟ್ಟು www.speakingtree.inಗೆ ಭೇಟಿ ಕೊಡಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಶುಕ್ರ | ಕೃಷ್ಣ ಅಷ್ಟಮಿ |
| 08 | ಗುರು | ಮಾಸ ಶಿವರಾತ್ರಿ |
| 09 | ಶುಕ್ರ | ಅಮಾವಾಸ್ಯೆ |
| 10 | ಶನಿ | ಆಶಾಢ ಮಾಸ ಆರಂಭ |
| 16 | ಶುಕ್ರ | ದಕ್ಷಿಣಾಯನ ಆರಂಭ |
| 17 | ಶನಿ | ಶುಕ್ಲ ಅಷ್ಟಮಿ |
| 19 | ಸೋಮ | ಶುಕ್ಲ ದಶಮಿ |
| 24 | ಶನಿ | ಗುರು ಪೂರ್ಣಿಮ |

### ಈ ತಿಂಗಳು ತಪೋನಗರದಲ್ಲಿ

ಸದ್ಯದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ವರ್ಚುವಲ್ ಆಗಿ ವೆಬ್‌ಕಾಸ್ಟ್ ಮೂಲಕ ನಡೆಸಲಾಗುತ್ತಿದೆ ಮತ್ತು ಸದ್ಯಕ್ಕೆ ತಪೋನಗರದಲ್ಲಿ ಯಾವುದೇ ರೀತಿಯ ಭೌತಿಕ ಸಭೆಗಳು ಇಲ್ಲ.

| | |
|---|---|
| ಭಾನುವಾರಗಳು | : ಉಪನ್ಯಾಸಗಳು : ಬೆಳಿಗ್ಗೆ 11ರಿಂದ ಮಧ್ಯಾಹ್ನ 12 ಲೈಟ್ ಚಾನೆಲಿಂಗ್: ಮಧ್ಯಾಹ್ನ 12 ರಿಂದ 1 |
| 11-07-2021 | ಶಂಬಲ ಗುಂಪಿನ ಸಭೆ ಮಧ್ಯಾಹ್ನ 2 ಗಂಟೆಗೆ ವೆಬ್‌ಕಾಸ್ಟ್ ಮೂಲಕ |
| 18-07-2021 | ರಾ ಗುಂಪಿನ ಸಭೆ ಮಧ್ಯಾಹ್ನ 2 ಗಂಟೆಗೆ ವೆಬ್‌ಕಾಸ್ಟ್ ಮೂಲಕ |
| 24-07-2021 | ಗುರು ಪೂರ್ಣಿಮಾ ವಿಶೇಷ ಧ್ಯಾನ, ಮಧ್ಯಾಹ್ನ 12 ರಿಂದ 1ರ ವರೆಗೆ ವೆಬ್‌ಕಾಸ್ಟ್ ಮೂಲಕ |

ಭಾನುವಾರದ ಉಪನ್ಯಾಸಗಳ ಲೈವ್ ವೆಬ್‌ಕಾಸ್ಟ್ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ. ವಿವರಗಳಿಗೆ ಮಾನಸ ಕಛೇರಿಗೆ ಇ-ಮೇಲ್ ಮೂಲಕ ಸಂಪರ್ಕಿಸಿ.

## ಲೈಟ್ ಚಾನಲಿಂಗ್ ಅನುಭವಗಳು ಮತ್ತು ಶಾಲೆಗಳಿಂದ ಬಂದ ಪ್ರತಿಕ್ರಿಯೆಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ

ಲೈಟ್ ಚಾನೆಲಿಂಗ್ ನನ್ನ ಮನಸ್ಸನ್ನು ವಿಶ್ರಾಂತಿಗೊಳಿಸುವ ಮೂಲಕ ನನಗೆ ಬಹಳ ಸಹಾಯ ಮಾಡಿದೆ. ನನ್ನ ತಲೆನೋವು ಕೂಡ ಕಡಿಮೆಯಾಗಿದೆ. ನಾನು ತಾಳ್ಮೆಯಿಂದಿರಲು ಕಲಿಯುತ್ತಿದ್ದೇನೆ ಆದರೆ ನಾನು ಇನ್ನೂ ಬಹು ದೂರ ಸಾಗಬೇಕು. ನನಗೆ ಬೇಡದೇ ಇರುವ ಆಲೋಚನೆಗಳಿಂದ ಹೊರ ಬರಲು ಇದು ಸಹಾಯ ಮಾಡಿದೆ.

ನಾನು ಒಂದು ತಿಂಗಳಿಂದ ನೋವನ್ನು ಅನುಭವಿಸುತ್ತಿದ್ದೆ. ಔಷಧ ಸಹಾಯ ಮಾಡಲಿಲ್ಲ. ಆದರೆ ಲೈಟ್ ಚಾನಲಿಂಗ್ ಆರಂಭ ಮಾಡಿದಾಗಲಿಂದ, ನನ್ನ ನೋವು ಕಡಿಮೆಯಾಗಿದೆ. ಮುಂಚೆ, ನೋವಿನಿಂದ ನನಗೆ ಸರಿಯಾಗಿ ನಿದ್ದೆ ಮಾಡಲಾಗುತ್ತಿರಲಿಲ್ಲ, ಆದರೆ ಈಗ ನಾನು ಪ್ರಶಾಂತವಾಗಿ ನಿದ್ದೆ ಮಾಡುತ್ತೇನೆ. ನಮಗೆ ಇದನ್ನು ಪರಿಚಯ ಮಾಡಿಸಿದ್ದಕ್ಕೆ ನಮ್ಮ ಶಾಲೆಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**–ಅಪೂರ್ವ ಸಾಕ್ಷಿ, 10ನೇ ತರಗತಿ, ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಕುಲಸೇಕರನ್ ಪಟ್ಟಿನಮ್, ವೆಸ್ಟ್ ಮಾಂಬಲಮ್, ಚೆನ್ನೈ**

ಲೈಟ್ ಚಾನೆಲಿಂಗ್ ಅನುಭವವು ಪದಗಳಲ್ಲಿ ವರ್ಣಿಸಲಾಗದಷ್ಟು ಸುಂದರವಾಗಿತ್ತು. ನನಗೆ ದಿವ್ಯತೆಯ ಅನುಭವವಾಯಿತು. ಆ ಶಾಂತತೆಯು ನನ್ನನ್ನು ಪರವಶಗೊಳಿಸಿತು.

**–ಶ್ವೇತ ಅಯ್ಯರ್ ಎಸ್., 10ನೇ ತರಗತಿ, ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಕುಲಸೇಕರನ್ ಪಟ್ಟಿನಮ್, ವೆಸ್ಟ್ ಮಾಂಬಲಮ್, ಚೆನ್ನೈ**

ಲೈಟ್ ಚಾನೆಲಿಂಗ್ ಅಭ್ಯಾಸ ಮಾಡಲಾರಂಭಿಸಿದ ನಂತರ ನನ್ನ ಜೀವನವು ಪೂರ್ಣವಾಗಿ ಬದಲಾಗಿದೆ. ನನ್ನಲ್ಲಿ ಅಹಂ ಜಾಸ್ತಿ ಇತ್ತು ಮತ್ತು ನಾನು ಬಹಳ ಮುಂಗೋಪಿಯಾಗಿದ್ದೆ ಆದರೆ ಈಗ ನನಗೆ ಕಿರಿಕಿರಿ ಉಂಟಾದಾಗ ಅಥವಾ ಕೋಪ ಬಂದಾಗ, ನಾನು ಲೈಟ್ ಚಾನೆಲಿಂಗ್ ಮಾಡುತ್ತೇನೆ ಮತ್ತು ನನಗೆ ಸಮಾಧಾನ ಸಿಗುತ್ತದೆ. ನಾನು ಭಾವನಾತ್ಮಕ ವ್ಯಕ್ತಿ ಮತ್ತು ಬಹುಬೇಗ ಆಘಾತಕ್ಕೊಳಗಾಗುತ್ತೇನೆ. ಆದರೆ ಈಗ ನಾನು ಧೃಡವಾಗುತ್ತಿದ್ದೇನೆ ಮತ್ತು ಯಾವುದಕ್ಕೂ ಭಯ ಪಡುವುದಿಲ್ಲ. ಲೈಟ್ ಚಾನೆಲಿಂಗ್ ಬಗ್ಗೆ ಕಲಿಯುವ ಅವಕಾಶ ದೊರೆಕಲು ನಾನು ಅದೃಷ್ಟ ಮಾಡಿದ್ದೆ.

**–ಕಾಜಲ್ ಭಂಡಾರಿ, 10ನೇ ತರಗತಿ, ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಕುಲಸೇಕರನ್ ಪಟ್ಟಿನಮ್, ವೆಸ್ಟ್ ಮಾಂಬಲಮ್, ಚೆನ್ನೈ**

ನನ್ನಲ್ಲಿ ಪ್ರಶಾಂತತೆಯನ್ನು ತರುವುದಕ್ಕೆ ಲೈಟ್ ಚಾನಲಿಂಗ್ ಸಹಾಯ ಮಾಡಿದೆ. ನಾನು ಪ್ರಾಶಾಂತತೆಯ ಶಕ್ತಿಯನ್ನು ಅರ್ಥ ಮಾಡಿಕೊಂಡಿದ್ದೇನೆ. ಉಪನ್ಯಾಸಗಳು, ಮಾತುಗಳು, ಉಪದೇಶಗಳು, ಭಾಷಣಗಳು ಮತ್ತು ಪ್ರವಚನಗಳಿಗಿಂತಲೂ ಅದು ಅನಂತವಾಗಿ ದೊಡ್ಡದು. ಅದು ನನ್ನನ್ನು ನಾನೇ ಚೆನ್ನಾಗಿ ಅರ್ಥಮಾಡಿಕೊಳ್ಳುವಂತೆ ಮಾಡಿತು. ನನಗೆ ವಿವರಿಸಲಾಗದಂತಹ ಸಂತೋಷದ ಅನುಭವವಾಯಿತು.

**–ವೇದಲಕ್ಷ್ಮಿ ಎಸ್., 10ನೇ ತರಗತಿ, ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಕುಲಸೇಕರನ್ ಪಟ್ಟಿನಮ್, ವೆಸ್ಟ್ ಮಾಂಬಲಮ್, ಚೆನ್ನೈ**

ಲೈಟ್ ಚಾನೆಲಿಂಗ್ ವಿನೋದವಾಗಿರುತ್ತದೆ ಹಾಗೂ ವಿಶ್ರಾಂತಿಯನ್ನೂ ಕೊಡುತ್ತದೆ. ನನ್ನಲ್ಲಿ ದಿವ್ಯ ಬೆಳಕು ಆವರಿಸಿದೆ ಎಂದೆನಿಸುತ್ತದೆ. ನಾನು ಈಗ ಸ್ವಲ್ಪ ದಿನಗಳಿಂದ ಲೈಟ್ ಚಾನೆಲಿಂಗ್ ಅಭ್ಯಾಸ ಮಾಡುತ್ತಿದ್ದೇನೆ ಮತ್ತು ನಾನು ಹೆಚ್ಚು ಶಾಂತವಾಗಿರುತ್ತೇನೆ ಮತ್ತು ವಿಶ್ರಾಂತಿಪಡುತ್ತೇನೆ. ಅದು ನನ್ನಲ್ಲಿ ಒಳ್ಳೆಯ ಭಾವನೆ ಮತ್ತು ಸಕಾರಾತ್ಮಕತೆಯನ್ನು ತರುತ್ತದೆ ಏಕೆಂದರೆ ನಾನು ನಮ್ಮ ಮಾತೃ ಭೂಮಿಗೆ ಕಿಂಚಿತ್ತಾದರೂ ಕೆಲಸ ಮಾಡುತ್ತಿದ್ದೇನೆ. ನಾನು ಈ ಅಭ್ಯಾಸವನ್ನು ಮುಂದುವರೆಸುತ್ತೇನೆ ಮತ್ತು ಒಳ್ಳೆಯ ವ್ಯಕ್ತಿಯಾಗಲು ಪ್ರಯತ್ನಿಸುತ್ತೇನೆ.

**–ರೋಮ ಬೈಡ್, 10ನೇ ತರಗತಿ, ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಕುಲಸೇಕರನ್ ಪಟ್ಟಿನಮ್, ವೆಸ್ಟ್ ಮಾಂಬಲಮ್, ಚೆನ್ನೈ**

ನಾನು ಪ್ರತಿದಿನ ಬೆಳಿಗ್ಗೆ ಎದ್ದ ನಂತರ ಹಾಗೂ ಮಲಗುವ ಮುಂಚೆ ಲೈಟ್ ಚಾನೆಲಿಂಗ್ ಮಾಡುತ್ತೇನೆ. ನನಗೆ ಮುಂಗೋಪವಿತ್ತು ಮತ್ತು ಚಿಕ್ಕ ಜಗಳವಿದ್ದರೆ ಅಥವಾ ನನ್ನನ್ನು ಅಣಕಿಸಿದರೆ, ನಾನು ಭಾವಾವೇಶಳಾಗುತ್ತಿದ್ದೆ. ಆದರೆ ಈಗ ನಾನು ಕ್ಷಮೆ ಕೇಳುತ್ತೇನೆ ಮತ್ತು ನನ್ನನ್ನು ಅಣಕಿಸಬೇಡಿ ಎಂದು ನಯವಾಗಿ ಅವರಿಗೆ ಹೇಳುತ್ತೇನೆ.

**–ಸೋಫಿಯ ಸಿ., 10ನೇ ತರಗತಿ, ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಕುಲಸೇಕರನ್ ಪಟ್ಟಿನಮ್, ವೆಸ್ಟ್ ಮಾಂಬಲಮ್, ಚೆನ್ನೈ**

ಲೈಟ್ ಚಾನಲಿಂಗ್ ಮಾಡುತ್ತಿರುವಾಗ ನಾನು ಹಗುರವಾಗುತ್ತಿದ್ದೀನಿ ಎಂದೆನಿಸಿತು ಮತ್ತು ಚಾನೆಲಿಂಗ್ ನಂತರ ನಾನು ಪ್ರಶಾಂತಗೊಂಡೆ ಮತ್ತು ಸಂತೋಷವಾಗಿದ್ದೆ.

**–ಅಜಿತ್ ಕುಮಾರ್, 10ನೇ ತರಗತಿ, ಸಿಟಿಝನ್ಸ್ ಹೈ ಸ್ಕೂಲ್, ಪಿಲ್ಲಣ್ಣ ಗಾರ್ಡನ್ಸ್, ಬೆಂಗಳೂರು**

ನಮ್ಮ ಶಾಲೆಯಲ್ಲಿ ದಿನಕ್ಕೆ ಎರಡು ಬಾರಿ 7 ನಿಮಿಷ ಲೈಟ್ ಚಾನೆಲಿಂಗ್ ಅಭ್ಯಾಸ ಮಾಡುತ್ತೇವೆ. ಒಂದು ದಿನ ನನ್ನ ತಂದೆಯ ಜೊತೆ ಬಹು ದೂರ ನಡೆದೆ. ಆ ದಿನ ರಾತ್ರಿ ನನಗೆ ಬಹಳ ಸುಸ್ತಾಗಿತ್ತು ಮತ್ತು ನನ್ನ ಕಾಲುಗಳು ನೋಯುತ್ತಿದ್ದವು. ನನಗೆ ಚೆನ್ನಾಗಿ ನಿದ್ದೆ ಬರುವುದಕ್ಕಾಗಿ ದೇವರನ್ನು ಪ್ರಾರ್ಥನೆ ಮಾಡಲು ನನ್ನ ತಾಯಿ ಹೇಳಿದರು. ನನಗೆ ಲೈಟ್ ಚಾನೆಲಿಂಗ್ ಬಗ್ಗೆ ಜ್ಞಾಪಕ ಬಂತು ಮತ್ತು 10 ನಿಮಿಷ ಅದನ್ನು ಅಭ್ಯಾಸ ಮಾಡಿದೆ. ನಂತರ ನಾನು ಚೆನ್ನಾಗಿ ನಿದ್ದೆ ಮಾಡಿದೆ.

**–ಶಿವರಾಜ್, 10ನೇ ತರಗತಿ, ಸೇಂಟ್ ರೋಹಿತ್ ಹೈ ಸ್ಕೂಲ್, ಬೆಂಗಳೂರು**

## ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಬಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ, ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ, ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ, ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

## ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

## ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು

**ಸಂ: ಶೋಭಾ ಕೆ. ರಾವ್; ಅನು: ಸುಜಾತ ವಿ**

ಆಗಸ್ಟ್ 2006

ನನಗೆ ವ್ಯಕ್ತಿಯೊಬ್ಬರು ಅಪರೂಪದ ಪತ್ರವನ್ನು ಬರೆದರು. ಅವರಿಗೆ ಬಹಳ ಕಷ್ಟಗಳಿವೆ. ಅವರು ಅಂಗವಿಕಲರು ಮತ್ತು ಎಲ್ಲ ರೀತಿಯ ಕಾಯಿಲೆಗಳಿವೆ. ಪತ್ರದ ಅಂತ್ಯದಲ್ಲಿ ಅವರು ಬರೆದಿದ್ದರು, "ನನ್ನ ಯಾವುದೇ ಕಾಯಿಲೆಗಳನ್ನು ಗುಣ ಪಡಿಸಿ ಎಂದು ನಾನು ನಿಮ್ಮನ್ನು ಕೇಳುತ್ತಿಲ್ಲ. ಇವುಗಳನ್ನು ಉಪಶಮನಗೊಳಿಸಿ ಎಂದು ಕೂಡ ನಿಮ್ಮನ್ನು ಕೇಳುತ್ತಿಲ್ಲ. ನಾನು ಏಕೆ ನರಳುತ್ತಿದ್ದೇನೆ ಎಂದು ತಿಳಿದುಕೊಳ್ಳಬೇಕು. ನನ್ನ ಗತಕಾಲವನ್ನು ತಿಳಿದುಕೊಳ್ಳಲು ಬಯಸುತ್ತೇನೆ." ನಾನು ಇಲ್ಲಿ ಎರಡು ವಿಷಯಗಳನ್ನು ಗಮನಿಸಿದ್ದೇನೆ. ಒಂದು – ಈ ವ್ಯಕ್ತಿಯನ್ನು ನೋಡಿ – ಅವರು ಉಪಶಮನವನ್ನು ಕೇಳುತ್ತಿಲ್ಲ – ಏಕೆ ನರಳುತ್ತಿದ್ದಾರೆಂದು ಅವರು ತಿಳಿದುಕೊಳ್ಳಬಯಸುತ್ತಾರೆ. ಅವರು ಹೇಳುತ್ತಾರೆ, "ನಿಮ್ಮ ಅನುಗ್ರಹ ಸಾಕು". ಆ ನಂಬಿಕೆಯನ್ನು ನೋಡಿ. ಇದು ಏಕೆಂದು ತಿಳಿಯಲು ಅವರು ಬಯಸುತ್ತಾರೆ. ಸಾಮಾನ್ಯವಾಗಿ ಜನರು ಅವರ ಭವಿಷ್ಯದ ಬಗ್ಗೆ ಕೇಳುತ್ತಾರೆ. 10 ವರ್ಷದ ನಂತರ ಏನು ಸಂಭವಿಸುತ್ತದೆಂದು ತಿಳಿಯಲು ಬಯಸುತ್ತಾರೆ; ನನ್ನ ಮಗಳಿಗೆ ಎಂ.ಬಿ.ಬಿ.ಎಸ್ ಸೀಟ್ ಸಿಗುತ್ತಾ? ಇತ್ಯಾದಿ. ಜನರಿಗೆ ಸಹಜವಾಗಿ ಭವಿಷ್ಯವನ್ನು ತಿಳಿದು ಕೊಳ್ಳುವ ಕುತೂಹಲ ಇರುತ್ತದೆ. ಆದರೆ ಜನರು ಹಿಂದೆ ನಡೆದದ್ದನ್ನು ಕೇಳುತ್ತಾರೆ. ಏಕೆ? ನಾನು ಇದಕ್ಕೆ ಅನೇಕ ನಿದರ್ಶನಗಳನ್ನು ಕಂಡಿದ್ದೇನೆ. ನನಗೆ ನಂತರ ಋಷಿಗಳು ಹೇಳಿದರು – ನಾನು ಟಿಪ್ಪಣಿಯನ್ನು ಮಾಡುತ್ತಿದ್ದಾಗ – ಇದು ನಾವು ಸತ್ಯ ಯುಗಕ್ಕೆ ಮುನ್ನಡೆಯುತ್ತಿರುವುದರ ಸೂಚನೆ. ನಾವು ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸುತ್ತೇವೆ, "ನಾವು ಏಕೆ ಇಲ್ಲಿದ್ದೇವೆ?" ನಾವು ಅನುಭವ ಪಡೆಯುವುದಕ್ಕಾಗಿಯಷ್ಟೇ ಇಲ್ಲಿದ್ದೇವೆಂದು ನಂತರ ತಿಳಿಯುತ್ತದೆ. ನಾವು ಇಲ್ಲಿಗೆ ಭೇಟಿಕಾರರು. ಜನರು ನಂತರ ವಾಪಸ್ಸು ಹೋಗಲು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತಾರೆ. ನನಗೆ ಈ ಬಗ್ಗೆ ತುಂಬಾ ಸಂತೋಷವಾಗಿದೆ. ನಾನು 30 ವರ್ಷಗಳಿಗಿಂತ ಹೆಚ್ಚಾಗಿ ಇಂತಹ ಆಧ್ಯಾತ್ಮಿಕ ಚಟುವಟಿಕೆಗಳನ್ನು ನೋಡುತ್ತಿದ್ದೇನೆ ಮತ್ತು ಈ ಪ್ರಕ್ರಿಯೆಗಳನ್ನು ಗಮನಿಸುತ್ತಿದ್ದೇನೆ. ನಾನು ಭಾರಿ ಬದಲಾವಣೆಯನ್ನು ಕಂಡಿದ್ದೇನೆ. ನಾವು ಸತ್ಯ ಯುಗವನ್ನು ಪ್ರವೇಶಿಸುತ್ತಿದ್ದೇವೆಂದು ನನ್ನ ಸ್ವಂತ ಅನುಭವದಿಂದ ನಂಬುತ್ತೇನೆ. ನಾನು ಇದಕ್ಕಿಂತ ಹೆಚ್ಚು ವಿವರಿಸಲಾರೆ.

ದಯವಿಟ್ಟು ಇದರ ಬಗ್ಗೆ ಯೋಚಿಸಿ ಮತ್ತು ಚಿಂತನೆಯನ್ನು ಮಾಡಿ. ಧ್ಯಾನದಲ್ಲಿ, ಕೆಲವೊಮ್ಮೆ ನಾವು ಒಂದು ಸಮಯವನ್ನು ಪ್ರವೇಶಿಸುತ್ತೇವೆ, ಅದು ಲಂಬವಾಗಿರುತ್ತದೆ; ಆಮೇಲೆ ನಾವು ಈ ಲಂಬವಾದ ಸಮಯದ ಅರಿವನ್ನು ಕಳೆದುಕೊಳ್ಳುತ್ತೇವೆ. ಇದ್ದಕ್ಕಿದ್ದಂತೆ, ನಮಗೆ ಹೊಸ ವಿಷಯಗಳ ಅರಿವಾಗುತ್ತದೆ. ಮತ್ತು ನಾವು ಈ ಮಟ್ಟದ ಅರಿವಿಗೆ ವಾಪಸ್ಸು ಬಂದಾಗ, ಅವುಗಳನ್ನು ನಾವು ಈ ಜೀವನಕ್ಕೆ ಸಂಬಂಧ ಕಲ್ಪಿಸಲು ಪ್ರಯತ್ನಿಸುತ್ತೇವೆ, ಅದು ನಮಗೆ ಸಾಧ್ಯವಾಗುವುದಿಲ್ಲ. ನಂತರ ನಾವು ಅದನ್ನು ವಿಚಿತ್ರವಾದ ಅನುಭವವೆಂದು ಯೋಚಿಸುತ್ತೇವೆ. ನಮಗೆ ವಿವರಿಸಲಾಗದಂತಹ ಅನುಭವಗಳನ್ನು, ನಮ್ಮ ಕಲ್ಪನಾಚಿತ್ರಗಳು ಅಥವಾ ಕಲ್ಪನೆಗಳೆಂದು ತೀರ್ಮಾನಿಸಬೇಡಿ. ಇಲ್ಲ; ನಮಗೆ ವಿವರಿಸಲಾಗದವು ಕೂಡ ನಿಜಸ್ಥಿತಿಗಳಾಗಿರುತ್ತವೆ. ನಮಗೆ ಅವುಗಳನ್ನು ಈ ಚೌಕಟ್ಟಿನಲ್ಲಿ ಅರ್ಥೈಸಲಾಗುತ್ತಿಲ್ಲ ಮತ್ತು ಕಾರಣ ತಿಳಿಯಲಾಗುತ್ತಿಲ್ಲ. ಆದರೆ ಅವು ವಾಸ್ತವವಾಗಿರುತ್ತವೆ. ಯಾವತ್ತಾದರೂ ಅವುಗಳನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ ಮತ್ತು ಯಾವತ್ತಾದರು ನಾವು ಪ್ರಜ್ಞಾಪೂರ್ವಕವಾಗಿ ಆ ವಲಯಗಳನ್ನು ಪ್ರವೇಶಿಸುತ್ತೇವೆ ಮತ್ತು ಪ್ರಜ್ಞಾಪೂರ್ವಕವಾಗಿ ಹೊಸ ಪ್ರಪಂಚಗಳನ್ನು ತಿಳಿಯಲು ಪ್ರಯತ್ನಿಸುತ್ತೇವೆ. ಅಂತಹ ಸಾಹಸಗಳನ್ನು ಮಾಡುವುದಕ್ಕೆ ಸಮಯ ಬಂದಿದೆ ಎಂದು ನನಗೆ ಅನಿಸುತ್ತಿದೆ ಮತ್ತು ನಾವು ಇವುಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಇವುಗಳನ್ನು ಹೇಗೆ ನಿಭಾಯಿಸುವುದು ಎಂದು ಯೋಚಿಸುತ್ತಿದ್ದೇವೆ. ನಮ್ಮಲ್ಲಿ ಇಂತಹ ವಿಚಾರಗಳು ಇದ್ದಾಗ, ನಾವು ನಿಮ್ಮ ಬಳಿ ಹಂಚಿಕೊಳ್ಳುತ್ತೇವೆ.

ನಾನು ಪುನಃ ಇದನ್ನು ಹೇಳುತ್ತಿದ್ದೇನೆ, "ಸಾಧನೆ ನಮ್ಮ ಸಮಸ್ಯೆಗಳನ್ನು ಬಗೆಹರಿಸುವುದರ ಬಗ್ಗೆ ಅಲ್ಲ." ನಮಗೆ ಅದು ಗೊತ್ತು. ಆದರೆ ನಮ್ಮ ಸಮಸ್ಯೆಗಳು ವಾಸ್ತವವಾಗಿರುತ್ತವೆ. ನಾವು ಅವುಗಳನ್ನು ಎದುರಿಸಬೇಕು. ಆದರೆ ನಮ್ಮ ಸಾಧನೆಯ ಗಮನವನ್ನು ಪರಿವರ್ತನೆಯಂತಹ ಗುರಿಗಳ ಕಡೆಗೆ ಬದಲಾಯಿಸಿಕೊಂಡರೆ, ನಮ್ಮ ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ. ನನ್ನನ್ನು ಒಪ್ಪಿಕೊಳ್ಳದ ಹಾಗೂ ಅರ್ಥಮಾಡಿಕೊಳ್ಳದ ವ್ಯಕ್ತಿಯೊಬ್ಬರ ಜೊತೆ ನಾನು ಮಾತನಾಡುತ್ತಿದ್ದೆ. ಆಕೆ ಪತ್ರಕರ್ತೆಯಾಗಿದ್ದರು. ನಾನು ಆಕೆಗೆ ಹೇಳಿದೆ, "ನೀವು ಧ್ಯಾನವನ್ನು ಮಾಡಿ, ನಿಮಗೆ ಒಳ್ಳೆಯದಾಗುತ್ತದೆ." ಆಕೆ ಕೇಳಿದರು, "ಈ ಕೊಲೆಗಳು ನಿಲ್ಲುತ್ತವೆಯೇ?" ನಾನು ಅವರಿಗೆ ಹೇಳಿದೆ, "ಹೌದು, ಅಂತಿಮವಾಗಿ." ಇಲ್ಲಿ ವಿಷಯವೇನೆಂದರೆ ನಾವು ಉತ್ತಮವಾದ ಗುರಿಗಳಿಗೆ ಗಮನ ಹರಿಸೋಣ, ಆಗ ಬೇರೆ ಎಲ್ಲ ವಿಷಯಗಳನ್ನು ನೋಡಿಕೊಳ್ಳಲಾಗುತ್ತದೆ. ನಮ್ಮ ಹಿಂದೆ, ಮಹಾನ್ ಶಕ್ತಿ ಇದೆ, ಕರುಣೆ ಮತ್ತು ಪ್ರೀತಿಯಿಂದ ತುಂಬಿರುವ ಮಹಾನ್ ಬುದ್ಧಿಶಕ್ತಿ ಇದೆ, ಎನ್ನುವುದನ್ನು ನಾವು ಯಾವಾಗಲೂ ನೆನಪಿನಲ್ಲಿ ಇಡಬೇಕು. ಅದು ದೇವರು ಮತ್ತು ಋಷಿಗಳು. ದೇವರು ಮತ್ತು ಋಷಿಗಳ ನಡುವೆ ನಾವು ವ್ಯತ್ಯಾಸ ಕಾಣುವಂತಿಲ್ಲ. ನಾನು ಋಷಿಗಳ ಬಗ್ಗೆ ಮಾತನಾಡಿದಾಗಲೆಲ್ಲ, ನಾನು ದೇವರ ಬಗ್ಗೆ ಮಾತನಾಡಿದಂತೆಯೇ. ನಮಗೆ ಇಂತಹ ವಿಷಯಗಳ ಅರಿವು ಇರುವುದರಿಂದ, ನಾವು ಉತ್ತಮವಾದ ವಿಷಯಗಳ ಕಡೆಗೆ ಗಮನ ಕೊಡೋಣ, ನಮ್ಮನ್ನು ನಾವು ಬದಲಾಯಿಸಿ ಕೊಳ್ಳೋಣ. ಆಗ ನಮ್ಮ ಸುತ್ತ ಎಲ್ಲವೂ ಬದಲಾಗುತ್ತವೆ; ನಮ್ಮ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತವೆ.

ಕೆಲವೊಮ್ಮೆ, ನಾವು ತಂತ್ರಗಳನ್ನು ಪುಸ್ತಕಗಳಿಂದ ಆಯ್ದುಕೊಂಡು ಅವನ್ನು ಅಭ್ಯಾಸ ಮಾಡುತ್ತೇವೆ. ಇದನ್ನು ಕುತೂಹಲಕ್ಕಾಗಿ ಮಾಡುತ್ತೇವೆ. "ಅದನ್ನು ಮಾಡಬೇಡಿ" ಎಂದು ನಾನು ಹೇಳಿದಾಗ, ಅದನ್ನೇ ಮಾಡಲು ಪ್ರಯತ್ನಿಸುವುದು ಪ್ರವೃತ್ತಿ. ಅದು ಮಾನವ ಸಹಜವಾದ ಪ್ರವೃತ್ತಿ. ಹೆಚ್ಚಿನ ಸಮಯಗಳಲ್ಲಿ, ನಮಗೆ ಅದರಿಂದ ತೊಂದರೆಗಳು ಆಗುವುದಿಲ್ಲ. ನೀವು ಒಂದು ತಂತ್ರವನ್ನು ತೆಗೆದುಕೊಂಡು, ಅದನ್ನು ಹೆಚ್ಚು ಅಭ್ಯಾಸ ಮಾಡಿದರೆ, ನಿಮಗೆ ತೊಂದರೆಗಳು ಉಂಟಾಗುತ್ತವೆ. ಯಾವುದೇ ತಂತ್ರವನ್ನು ನಾವು ಹೆಚ್ಚು ಅಭ್ಯಾಸ ಮಾಡದಿದ್ದರೆ, ಆಗ ನಾವು ಸುರಕ್ಷಿತ ಪ್ರದೇಶದಲ್ಲಿ ಅಥವ ಸುರಕ್ಷಿತ ವಲಯದಲ್ಲಿ ಇರುತ್ತೇವೆ. ಕೆಲವೊಮ್ಮೆ, ನಾವು ಲಘುವಾಗಿ ಅಭ್ಯಾಸ ಮಾಡಿದರೆ ಕೂಡ, ಅದು ಹಾನಿ ಮಾಡುತ್ತದೆ. ಒಂದು ಮುಖ್ಯವಾದ ಕಾರಣ ಇದು – ಪುಸ್ತಕದಲ್ಲಿ ಮುದ್ರಿಸಿರುವ ಎಲ್ಲ ತಂತ್ರಗಳು, ವಿಧಾನಗಳು, ಯಾವಾಗಲೂ ದೇವರಿಗಾಗಿ ಕೆಲಸ ಮಾಡುವ ಗುಂಪಿನವರದ್ದೇ ಆಗಿರುವುದಿಲ್ಲ. ಅಂದರೆ, ದುಷ್ಟ ಗುಂಪುಗಳೂ ಇರುತ್ತವೆ. ಅವರೂ ಕೂಡ ಬಹಳ ಬುದ್ಧಿಶಕ್ತಿ ಉಳ್ಳವರು. ಅವರು ಸೂಕ್ಷ್ಮ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಅವರು ಬಹಳ ವಿಷಯಗಳ ಬಗ್ಗೆ ಚೆನ್ನಾಗಿ ಮಾತನಾಡುತ್ತಾರೆ ಮತ್ತು ಕೆಲವೊಮ್ಮೆ ನಮಗೆ ಹಾನಿ ಆಗುವಂತಹ ತಂತ್ರಗಳನ್ನು ಪ್ರಸ್ತುತ ಪಡಿಸುತ್ತಾರೆ. ಹೇಗೆ ಹಾನಿ ಆಗುತ್ತದೆಂದು ನೀವು ಆಶ್ಚರ್ಯ ಪಡಬಹುದು. ತುಂಬಾ ಕಷ್ಟದಿಂದ ನಾವು ಸ್ವಲ್ಪ ಶಕ್ತಿಯನ್ನು ಧ್ಯಾನದಿಂದ ಸಂಗ್ರಹಿಸುತ್ತೇವೆ ಮತ್ತು ಆ ಶಕ್ತಿಯೂ ನಾಶವಾಗುತ್ತದೆ. ನಮ್ಮಲ್ಲಿ ರಕ್ಷಾಕವಚ ಇದೆ, ಋಷಿಗಳ ಸಹಾಯದಿಂದ ನಾವೇ ಅದನ್ನು ಕಟ್ಟಿರುತ್ತೇವೆ. ಅದರಲ್ಲಿ ರಂಧ್ರಗಳಾಗುತ್ತವೆ, ಹಾನಿಯಾಗುತ್ತದೆ. ನಂತರ ನಾವು ಮೊದಲಿನಿಂದ ಪ್ರಾರಂಭಿಸಬೇಕಾಗುತ್ತದೆ. ಋಷಿಗಳು ತುಂಬಾ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ನಾವು ಅವರಿಗೆ ತೊಂದರೆ ಕೊಡುವುದು ಬೇಡ.

ಕಳೆದ ವಾರ, ನಾನು ಹೆಚ್ಚು ಧ್ಯಾನ ಮಾಡಬೇಕೆಂದಿದ್ದೆ. ದೇವಿಯ ಚೈತನ್ಯಗಳು 10 ದಿನಗಳು ಇಲ್ಲಿ ಇರುತ್ತವೆಂದು ನನಗೆ ಗೊತ್ತಿದ್ದು ಅದನ್ನು ಹೆಚ್ಚು ಪಡೆದುಕೊಳ್ಳಬೇಕೆಂದು ನಾನು ಬಯಸಿದ್ದೆ. ಆದರೆ, ನನಗೆ 10 ನಿಮಿಷಗಳಷ್ಟೇ ಧ್ಯಾನ ಮಾಡಲು ಸಾಧ್ಯವಾಯಿತು. ಈ 10 ನಿಮಿಷಗಳಲ್ಲಿಯೇ, ನನಗೆ ಬಹಳ ವಿಷಯಗಳು ತಿಳಿಸಲಾಯಿತು. ಆಗ, ಧ್ಯಾನದ ಅವಧಿಗಿಂತ, ಧ್ಯಾನದ ಪ್ರಯತ್ನಕ್ಕಿಂಥ ಅನುಗ್ರಹವೇ ಯಾವಾಗಲೂ ದೊಡ್ಡದೆಂದು ನನಗೆ ಅರಿವಾಯಿತು. ಋಷಿಗಳು ನಿಮ್ಮ ಜೊತೆ ಮಾತನಾಡಬೇಕೆಂದು ಬಯಸಿದರೆ, ನಿಮಗೆ ಅವರೊಂದಿಗೆ ಸಂಪರ್ಕ ಇರಲಿ ಅಥವಾ ಇಲ್ಲದಿರಲಿ, ನಿಮ್ಮೊಂದಿಗೆ ಅವರು ಯಾವಾಗ ಬೇಕಾದರೂ ಮಾತನಾಡುತ್ತಾರೆ.

ನಾವು ಹೊಸ ಯುಗ, ಸತ್ಯ ಯುಗಕ್ಕೆ ಪ್ರವೇಶ ಮಾಡುತ್ತಿದ್ದೇವೆಂದು ಸ್ಪಷ್ಟವಾಗಿದೆ. 'ಹೊಸ ಯುಗ' ಪದವು ಬಹಳ ಶೋಷಣೆಗೆ ಒಳಗಾಗಿದೆ. ಕೆಲವೊಮ್ಮೆ ಈ ಪದವನ್ನು ಬಹಳಷ್ಟು ವಿಕೃತಗೊಳಿಸಲಾಗಿದೆ. ಹೊಸ ಯುಗದ ಗುಂಪುಗಳು ಬಹಳಷ್ಟು ಇವೆ. ಅವನ್ನೆಲ್ಲ ನಾವು ಅಧ್ಯಯನ ಮಾಡಿ ಅರ್ಥ ಮಾಡಿಕೊಳ್ಳಬೇಕು. ಇದು ಶೋಚನೀಯವಾಗಿದೆ ಏಕೆಂದರೆ ನಾವು ಈ ಪದವನ್ನು ಬಳಸಿದಾಗ ಜನರು ಈ ಗುಂಪುಗಳ ಮೇಲೆ ಒಳ್ಳೆಯ ವಿಷಯಗಳನ್ನು ಜೊತೆಗೂಡಿಸುವುದಿಲ್ಲ. ಇದನ್ನು ಗಮನಿಸಿದಾಗ ದುಃಖವಾಗುತ್ತದೆ.

ನಾವು ಸತ್ಯ ಯುಗದ ಪದವನ್ನು ಬಳಸಿದಾಗಲೆಲ್ಲಾ, ಇದು ಹಿಂದುಗಳ ಪರಿಕಲ್ಪನೆ, ಹಿಂದುಗಳ ನಂಬಿಕೆ ಎಂದು ಜನರು ಹೇಳುವುದನ್ನು ನಾನು ಕೇಳಿದ್ದೇನೆ. ಹೊಸ ಯುಗ, ಸುವರ್ಣ ಯುಗಗಳ ವಾಸ್ತವಿಕತೆಯನ್ನು ವಿವರಿಸಲು ಈ ಪದಗಳು ಸೂಕ್ತವಾಗಿಲ್ಲ, ಅಥವಾ ಸಾಲದು. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ

23–05–2021

ಆಧ್ಯಾತ್ಮಿಕ ಅನ್ವೇಷಕರಿಗೆ, ಬಹುಶಃ ಗುರೂಜಿಯವರ ಜೀವನ ಒಂದು ಅತ್ಯುತ್ತಮವಾದ ನಿದರ್ಶನ ಅಥವಾ ಅತ್ಯುತ್ತಮವಾದ ದಾರಿದೀಪ. ಅವರು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಪ್ರತಿಕೂಲತೆಯನ್ನು ಎದುರಿಸಬೇಕಾಯಿತು ಎಂಬುದು ನಮಗೆ ತಿಳಿದಿದೆ, ಆದರೆ ಅವರು ಎಂದಿಗೂ ಅದರ ಬಗ್ಗೆ ಕಹಿ ಭಾವನೆ ಹೊಂದಲಿಲ್ಲ. ಪ್ರತಿಕೂಲತೆಗಳು ಅವರ ಆಂತರಿಕ ಜೀವನವನ್ನು ಪೋಷಿಸಿಕೊಳ್ಳಲು ಸಹಾಯವಾಯಿತು ಎಂದು ಅವರು "ಬೆಳಕಿಗೆ ಬಾಗಿಲುಗಳು" ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಇಲ್ಲಿ, ನಮಗೆ ತಿಳಿದಿದೆ, ನಾವು ಜಾಗೃತಗೊಳ್ಳಲು ಪ್ರತಿಕೂಲತೆಯು ಒಂದು ಅವಕಾಶ ಎಂದು ನಾವು ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದೇವೆ. ನಾವು ಅದನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಬೇಕು ಮತ್ತು ಗೊಣಗಾಡುವುದರಿಂದ ಅಥವಾ ದೂರುವುದರಿಂದ ಆ ಅವಕಾಶವನ್ನು ವ್ಯರ್ಥ ಮಾಡಿಕೊಳ್ಳಬಾರದು. ಗುರೂಜಿಯವರು ಗೊಣಗಲಿಲ್ಲ, ದೂರಲಿಲ್ಲ ಮತ್ತು ಅವರೆಂದೂ ಕಹಿಯಾಗಲಿಲ್ಲ.

ಅವರು ಬಹಳಷ್ಟು ಸಾಹಿತ್ಯವನ್ನು ಓದಿದ್ದರು – ಆಂಗ್ಲ ಮತ್ತು ಕನ್ನಡ – ಅವರ ಆಂತರಿಕ ಜೀವನವನ್ನು ಪೋಷಿಸಿಕೊಂಡರು. ಮತ್ತು ಅವರು ಬರೆದರೂ ಕೂಡ. ಅವರು ಅನೇಕ ಕಾದಂಬರಿಗಳನ್ನು ಮತ್ತು ಸಣ್ಣ ಕಥೆಗಳನ್ನು ಬರೆದರು. ವರ್ಣಚಿತ್ರಗಳನ್ನೂ ಬಿಡಿಸಿದರು. ದುರದೃಷ್ಟವಶಾತ್, ಅವು ಯಾವುವೂ ನಮ್ಮ ಬಳಿ ಇಲ್ಲ. ಆದರೆ, ಅವರು ಮಹರ್ಷಿ ಅಮರರವರನ್ನು ಭೇಟಿಯಾದ ನಂತರ, ಬರೆದುದೆಲ್ಲವೂ ನಮ್ಮ ಬಳಿ ಇವೆ. "ಬೆಳಕಿಗೆ ಬಾಗಿಲುಗಳು" ಮತ್ತು ಅವರು ಬರೆದಿರುವ ಇನ್ನೂ ಅನೇಕ ಪುಸ್ತಕಗಳು ನಮ್ಮ ಬಳಿ ಇವೆ. ಈ ಪುಸ್ತಕಗಳು ಒಂದು ನಿಧಿ, ನಮಗೆ ಮಾತ್ರವಲ್ಲ ಆದರೆ ಎಲ್ಲಾ ಮಾನವ ಜನಾಂಗಕ್ಕೆ.

ಅವರ ಜೀವನವನ್ನು ವಿಶ್ವಾಮಿತ್ರ ಮಹರ್ಷಿಗಳು ಯೋಜಿಸಿದ್ದರು ಎಂದು ಗುರೂಜಿಯವರು ಹೇಳುತ್ತಿದ್ದರು. ಅವರು ತಮ್ಮ ಜೀವನವು ಹಾಗೇಕೆ ಇತ್ತು ಎಂದು ಒಂದೇ ಒಂದು ಪ್ರಶ್ನೆಯನ್ನೂ ಕೇಳುತ್ತಿರಲಿಲ್ಲ. ಋಷಿಗಳು ಇವರಿಗಾಗಿ ಯಾವುದೇ ರೀತಿಯ ಬದುಕನ್ನು ರೂಪಿಸಿದರೂ, ಒಂದೂ ಪ್ರಶ್ನೆಯನ್ನು ಕೇಳದೇ ಒಪ್ಪಿಕೊಳ್ಳುತ್ತಿದ್ದರು. ಅವರು ಋಷಿಗಳಲ್ಲಿ ಇಟ್ಟ ನಂಬಿಕೆ ಬಂಡೆಯಷ್ಟು ಗಟ್ಟಿ, ಅಚಲವಾದದ್ದು ಮತ್ತು ಅವರ ಶರಣಾಗತಿಯು ಪರಿಪೂರ್ಣವಾದದ್ದು. ಅವರನ್ನು ಜನರು, "ಋಷಿಗಳು ಏಕೆ ಬಡ ಕುಟುಂಬದಲ್ಲಿ ಜನಿಸುತ್ತಾರೆ ಮತ್ತು ಅಷ್ಟೊಂದು ಪ್ರತಿಕೂಲತೆ ಹಾಗೂ ಅಪಮಾನಗಳನ್ನು ಅನುಭವಿಸುತ್ತಾರೆ? ಅಂತಹ ಜೀವನವನ್ನು ಅವರು ಏಕೆ ಆಯ್ಕೆ ಮಾಡಿಕೊಳ್ಳುತ್ತಾರೆ?" ಎಂದು ಕೇಳಿದಾಗ, ಗುರೂಜಿಯವರು, ಅಂತಹ ಜೀವನ ಭಗವಂತನನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಲು ಸಹಾಯ ಮಾಡುತ್ತದೆ, ದೇವರೊಂದಿಗೆ ಸದಾ ಸಂಪರ್ಕದಲ್ಲಿರಲು ಸಹಾಯ ಮಾಡುತ್ತದೆ ಎಂದು ಹೇಳುತ್ತಿದ್ದರು. ವಿಶ್ವಾಮಿತ್ರ ಮಹರ್ಷಿಗಳಿಂದ ರೂಪಿತವಾಗಿದ್ದ ಗುರೂಜಿಯವರ ಜೀವನ ಪೂರ್ಣ ಸವಾಲುಗಳಿಂದ ಮತ್ತು ಹೋರಾಟಗಳಿಂದ ತುಂಬಿತ್ತು. ಅಲ್ಲದೆ, ವಿಶ್ವಾಮಿತ್ರ ಮಹರ್ಷಿಗಳು ಅಂತಹ ಸವಾಲು ಮತ್ತು ಹೋರಾಟಗಳಿಂದ ಕೂಡಿದ ಜೀವನವನ್ನು ಗುರೂಜಿಯವರಿಗೆ ಆಯ್ಕೆ ಮಾಡಿರಲು ಕಾರಣವಿದ್ದಿರಲೇಬೇಕು.

ಒಂದು ಕಷ್ಟಕರವಾದ ಜೀವನ ಮಾರ್ಗವನ್ನು ವಿಶ್ವಾಮಿತ್ರ ಮಹರ್ಷಿಗಳು ಆಯ್ಕೆ ಮಾಡಿದ್ದರೂ ಸಹ, ಗುರೂಜಿಯವರಿಗೆ ಅಷ್ಟೊಂದು ಸಂಕಷ್ಟವನ್ನು ಬಯಸಿರಲಾರರು ಎಂದು ನನ್ನ ಭಾವನೆ. ಕೆಲವೊಂದು ಸಂಕಷ್ಟಗಳು ಬಹುಶಃ ಅನಿವಾರ್ಯವಾಗಿರಬಹುದು ಮತ್ತು ಬಹಳಷ್ಟು ಸಂಕಷ್ಟಗಳನ್ನು ತಡೆಯಬಹುದಾಗಿತ್ತು. ನಾನು ಹೀಗೆ ಭಾವಿಸುತ್ತೇನೆ. ಕೆಲವು ವ್ಯಕ್ತಿಗಳು ಗುರೂಜಿಯವರೊಂದಿಗೆ ಬಹಳ ಕಠಿಣರಾಗಿರಲು ಆಯ್ಕೆ ಮಾಡಿಕೊಂಡಿದ್ದರು. ಅವರು ಆ ರೀತಿ ಇರಬೇಕಾದ ಅಗತ್ಯತೆ ಇರಲಿಲ್ಲ. ಅವರು ಗುರೂಜಿಯವರಿಗೆ ಬೆಂಬಲವಾಗಿರಲು ಆಯ್ಕೆ ಮಾಡಿಕೊಳ್ಳಬಹುದಿತ್ತು. ಜೀವನವು ಲಕ್ಷಾಂತರ ಸಾಧ್ಯತೆಗಳಿರುವ ಪಯಣ ಎಂಬುದು ನಮಗೆ ಗೊತ್ತು. ಮೊದಲೇ ಅನೇಕ ಸವಾಲುಗಳಿಂದ ರಚಿತವಾಗಿದ್ದ ಅವರ ಜೀವನಕ್ಕೆ, ಜನರು ಕಠಿಣರಾಗಿರಲು ಆಯ್ಕೆ ಮಾಡಿದ ಕಾರಣ, ಹೆಚ್ಚುವರಿ ಸಮಸ್ಯೆಗಳು ಮತ್ತು ಪ್ರತಿಕೂಲತೆಗಳು ಕೂಡಿಕೊಂಡವು. ಇದು ಒಂದು ಭಾಗ.

ಯಾವುದೇ ಋಷಿಯ ಜೀವನವು ಸಾಮಾನ್ಯವಾಗಿ ಸದಾ ಸವಾಲುಗಳಿಂದಲೇ ತುಂಬಿರುತ್ತದೆ ಎಂದು ನನಗನಿಸುತ್ತದೆ. ಏಕೆಂದರೆ, ಅವರೇ ಹೇಳುವಂತೆ, ಅವರು ಒಂದು ಬೃಹತ್ ಬದಲಾವಣೆಯನ್ನು, ಪ್ರಜ್ಞೆಯ ಮಟ್ಟದಲ್ಲಿ ಒಂದು ಮಾರ್ಪಾಡು ತರಲು ಪ್ರಯತ್ನಿಸುತ್ತಿರುತ್ತಾರೆ. ಅವರು, ಅಜ್ಞಾನವೆಂಬ ಅಂಧಕಾರವನ್ನು ತೊಡೆದು ಹಾಕಲು ಪ್ರಯತ್ನ ಪಡುತ್ತಿರುತ್ತಾರೆ, ಆದರೆ ಅದು ಸಮಾಜಗಳಲ್ಲಿ ಎಷ್ಟು ವ್ಯಾಪಕವಾಗಿದೆಯೆಂದರೆ, ಜನರು ಹೊಸ ವಿಚಾರಗಳನ್ನು, ಕ್ರಾಂತಿಕಾರಿ ವಿಚಾರಗಳನ್ನು ಒಪ್ಪಿಕೊಳ್ಳಲು ಕಷ್ಟ ಪಡುತ್ತಾರೆ. ಜನರಿಗೆ ಅದನ್ನು ಒಪ್ಪಿಕೊಳ್ಳುವುದು ಕಷ್ಟ ಸಾಧ್ಯವಾದಾಗ, ಅವರೇ ಒಂದು ತಡೆಗೋಡೆಯಾಗುತ್ತಾರೆ. ಋಷಿಗಳು ಹೊರತರಲಿರುವ ಬದಲಾವಣೆಗಳು ಜನರಲ್ಲಿ ಪ್ರಕಟವಾಗಬೇಕು. ಇಲ್ಲವಾದರೆ, ಪ್ರಜ್ಞೆಯ ಮಟ್ಟದಲ್ಲಿನ ಮಾರ್ಪಾಡೆಂದರೆ ಏನು? ಪ್ರಜ್ಞೆಯ ಮಟ್ಟದಲ್ಲಿನ ಬದಲಾವಣೆ ಜನರಲ್ಲಿ ಪ್ರಕಟವಾಗಬೇಕು, ಜನರಲ್ಲಿ ಕಾಣಬೇಕು, ಅವರ ನಡವಳಿಕೆಯಲ್ಲಿ, ಅವರ ಜೀವನ ಶೈಲಿಯಲ್ಲಿ ಕಾಣಿಸಿಕೊಳ್ಳಬೇಕು. ಕೆಲವೊಮ್ಮೆ, ಒಳ್ಳೆಯ ಜನರೂ ಕೂಡ, ಬಹುಶಃ ಗೊತ್ತಿಲ್ಲದೆಯೇ, ಅರಿವಿಲ್ಲದೆಯೇ ತಡೆಗೋಡೆಗಳಾಗಿಬಿಡುತ್ತಾರೆ. ಆದುದರಿಂದಲೇ ಕೆಲಸವೂ ಕಷ್ಟವಾಗುವುದು. ಕೆಲವೊಮ್ಮೆ ಗುರೂಜಿಯವರು ಹಾಸ್ಯಮಯವಾಗಿ ಹೇಳುತ್ತಿದ್ದರು, "ನೀವೆಲ್ಲಾ ನನ್ನ ಪರೀಕ್ಷೆಗಳು."

ಮಹಾನ್ ಮಾಸ್ಟರ್‌ಗಳಾದ ಏಸುಕ್ರಿಸ್ತ ಅಥವಾ ಸಂತ ಏಕನಾಥ್‌ರವರ ಜೀವನಗಳನ್ನು ಪರಿಗಣಿಸಿ. ಎಷ್ಟು ಕಷ್ಟಮಯವಾಗಿತ್ತು! ಋಷಿಗಳು ಕಷ್ಟಕರವಾದ ಜೀವನವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಏಕೆಂದರೆ ಅದು ಅವರಿಗೆ ದೇವರೊಂದಿಗೆ ಸಂಪರ್ಕದಲ್ಲಿರಲು ಸಹಾಯವಾಗುತ್ತದೆ ಎಂದು ಗುರೂಜಿ ಹೇಳುತ್ತಿದ್ದರು.

ತಿಂಗಳುಗಟ್ಟಲೆ ಗುರೂಜಿಯವರು ಒಂದು ಗುಡಿಸಲಿನಲ್ಲಿ ಜೀವಿಸಬೇಕಾಯಿತು ಎಂದು ನಮಗೆ ತಿಳಿದಿದೆ. ಆ ಗುಡಿಸಲು ಹುಲ್ಲಿನ ಛಾವಣಿ ಹೊಂದಿತ್ತು. ಒಂದು ದಿನ, ಅವರು ಮಲಗಿಕೊಂಡು ವಿರಮಿಸುತ್ತಿದ್ದರು. ಹಾಗೆಯೇ ಮೇಲೆ ನೋಡಿದಾಗ, ಒಂದು ಹಾವು ಸರಿದಾಡುತ್ತಿದ್ದುದನ್ನು ನೋಡಿದರು ಎಂದು ಅವರು ಹೇಳಿದ್ದರು. ಒಬ್ಬ ಸಾಧಾರಣ ಮಾನವನ ಮಟ್ಟದಲ್ಲಿ ಆ ಅನುಭವವು ಎಷ್ಟು ಗಾಬರಿಪಡಿಸುವ ಮತ್ತು ಸ್ಥೈರ್ಯಗೆಡಿಸುವಂಥದ್ದು! ಗುರೂಜಿಯವರು ಸದಾ ಋಷಿಗಳ ಸಂಪರ್ಕದಲ್ಲಿದ್ದು ಹಾಗೂ ಅಂತರ್ದೃಷ್ಟಿಯಿಂದ ಋಷಿಗಳಿಂದ ಮಾರ್ಗದರ್ಶನ ಪಡೆಯುತ್ತಿದ್ದರೂ ಸಹ, ಮಾಸ್ಟರ್‌ಗಳಿಗೂ ಕೂಡ ಅನ್ಯ ಬದುಕನ್ನು ಆರಿಸಿಕೊಳ್ಳುವ ಸ್ವಾತಂತ್ರವಿರುತ್ತದೆ ಎಂದು ನನ್ನ ಭಾವನೆ. ಅವರು ಮತ್ತೆ ಪ್ರಾಪಂಚಿಕ ಜೀವನಕ್ಕೆ ಹಿಂದಿರುಗುವ ಸ್ವಾತಂತ್ರ್ಯ ಅವರಿಗಿರುತ್ತದೆ, ವಿಶಿಷ್ಟವಾಗಿ ಸ್ಥೈರ್ಯಗೆಡಿಸುವ ಸಂದರ್ಭಗಳು ಉಂಟಾದಾಗ. ಆದರೆ, ಗುರೂಜಿಯವರಂತಹ ಮಾಸ್ಟರ್‌ಗಳು ಸದಾ ಸರಿಯಾದದ್ದನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಅವರು ಹುಟ್ಟಿನಿಂದಲೇ ಮಾಸ್ಟರ್‌ಗಳಾಗಿರುತ್ತಾರೆ.

ಗುರೂಜಿಯವರು ಸದಾ ಋಷಿಗಳ ಕೆಲಸ ಮಾಡುವುದನ್ನೇ ಆಯ್ಕೆ ಮಾಡಿದ್ದರು. ಅದಕ್ಕಾಗಿ ಅವರಿಗೆ ಧನ್ಯವಾದಗಳು, ಇಂದು ನಾವು ಈ ಮಾರ್ಗದಲ್ಲಿ, ಋಷಿಗಳ ಮಾರ್ಗದಲ್ಲಿ ಇದ್ದೇವೆ. ಅವರಿಗೆ ಧನ್ಯವಾದಗಳು, ನಮಗೆ ಅಗಾಧವಾದ ನಿಧಿಗೆ ಅವಕಾಶವಿದೆ – ಋಷಿಗಳ ಜ್ಞಾನ, ವಿವೇಕ ಮತ್ತು ಋಷಿಗಳಿಂದ ದೊರೆತ ಚೈತನ್ಯಗಳು. ಅವರಿಗೆ ಧನ್ಯವಾದಗಳು, ನಮಗೆ ಒಂದು ನಿಯಮಿತ ವ್ಯವಸ್ಥೆ ಇದೆ, ಧ್ಯಾನದ ಬೋಧನೆ ಮುಂದುವರೆಸಲು ಒಂದು ಘನ ವೇದಿಕೆ ಇದೆ. ಗುರೂಜಿಯವರು ಇದನ್ನೆಲ್ಲಾ ನಮಗಾಗಿ ಮಾಡದೇ ಹೋಗಿದ್ದರೆ, ಬಹುಶಃ ಇದು ಸಾಧ್ಯವಾಗುತ್ತಿರಲಿಲ್ಲ.

ಅವರ ಜೀವನದ ಮೂಲಕ ಋಷಿಗಳ ಕೆಲಸ ಮಾಡುವ ಬದ್ಧತೆಯನ್ನು ನಮಗೆ ಕಲಿಸಿದ್ದಾರೆ. ಅವರು ನಮಗೆ ದೃಢನಿಷ್ಠೆ, ನಂಬಿಕೆ ಮತ್ತು ಬೇಷರತ್ತಾದ ಪ್ರೀತಿಯನ್ನು ಕಲಿಸಿದ್ದಾರೆ. ಅವರು ಬಹಳ ವಾಸ್ತವವಾದಿಯೂ ಆಗಿದ್ದರು. ದೇವರು ಅನುಗ್ರಹವನ್ನು ತೋರಿ, ಗುರೂಜಿಯವರಿಗೆ ಸ್ವಲ್ಪ ಅನುಕೂಲತೆಗಳನ್ನು ಮತ್ತು ಉತ್ತಮ ಜೀವನ ಪರಿಸ್ಥಿತಿಯನ್ನು ಒದಗಿಸಿದನು. "ನಾನು ಈಗ ಉತ್ತಮ ಸ್ಥಿತಿಯಲ್ಲಿ ಜೀವಿಸುತ್ತಿದ್ದೇನೆ, ಮತ್ತೊಮ್ಮೆ ನಾನು ಗುಡಿಸಿಲಿಗೆ ಹಿಂದಿರುಗುವಂತಾದರೆ ಅದು ನಿಜವಾಗಿಯೂ ಬಹಳ ಕಷ್ಟವಾಗುತ್ತದೆ," ಎಂದು ಅವರು ಹೇಳುತ್ತಿದ್ದರು. ಆ ಸನ್ನಿವೇಶ ಬಂದಿದ್ದರೆ ಅವರು ಅದನ್ನು ಒಪ್ಪಿಕೊಳ್ಳುತ್ತಿರಲಿಲ್ಲವೆಂದಲ್ಲ.

"ನಾವು ಮಾನವರು. ಈ ಮಾನವತ್ವವನ್ನು ಸದಾ ಜೀವಂತವಾಗಿಟ್ಟಿರಬೇಕು. ಮೊದಲು ಮಾನವತ್ವ ನಂತರ ದೈವತ್ವ," ಎಂದು ಅವರು ಹೇಳುತ್ತಿದ್ದರು.

(6ನೇ ಪುಟದಲ್ಲಿ ಮುಂದುವರೆದಿದೆ)

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆ ಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ

(5ನೇ ಪುಟದಿಂದ ಮುಂದುವರೆದಿದೆ)

ಅವರು ಒಂದು ಜ್ಞಾನ ಭಂಡಾರ. ಅವರು ಎಷ್ಟೊಂದು ತಿಳಿದಿದ್ದರು. ಅವರು ಎಷ್ಟೊಂದು ಓದಿಕೊಂಡಿದ್ದರು. ಅವರು ಅನೇಕ ಸಿನಿಮಾಗಳನ್ನು, ಸಾಕ್ಷ್ಯ ಚಿತ್ರಗಳನ್ನು ವೀಕ್ಷಿಸಿದ್ದರು. ಅವರ ತಿಳುವಳಿಕೆ ಎಷ್ಟು ಆಳವಾಗಿತ್ತು. ಅವರೊಡನೆ ಮಾತನಾಡುವುದು ದೇವರೊಂದಿಗೆ ಮಾತನಾಡುವ ರೀತಿ ಇರುತ್ತಿತ್ತು. ನಾವು ಅವರೊಡನೆ ಸಂಪೂರ್ಣವಾಗಿ ತೆರೆದ ಮನಸ್ಸಿನಿಂದ ಮಾತನಾಡಬಹುದಾಗಿತ್ತು. ಅವರು ದೇವರುಗಳೊಂದಿಗೆ ಸಂಭಾಷಣೆ ನಡೆಸುತ್ತಿದ್ದರು. ನಮ್ಮೊಂದಿಗೆ ವ್ಯವಹರಿಸುವ ರೀತಿಯಲ್ಲಿಯೇ ಅವರು ಋಷಿಗಳೊಂದಿಗೆ ಸಂವಹನೆ ನಡೆಸುತ್ತಿದ್ದರು. ಅವರು ಹೊತ್ತಿದ್ದ, ಕಂಪಿಸುತ್ತಿದ್ದ ದೈವೀಕ ಪ್ರೀತಿ ಇದನ್ನು ಸಾಧ್ಯವಾಗಿಸಿತ್ತು ಎನಿಸುತ್ತದೆ.

ಋಷಿಗಳನ್ನು ಸಂಪರ್ಕಿಸಲು ನಮಗೆ ಯಾವುದೇ ತಂತ್ರದ ಅಗತ್ಯವಿಲ್ಲ ಎಂದು ನಮಗೆ ಅವರು ಅನೇಕ ಬಾರಿ ಹೇಳಿದ್ದರು. ನಾವು ಅವರೊಂದಿಗೆ ಅದ್ಭುತವಾದ ಪ್ರೀತಿಯಿಂದ ಮಾತನಾಡಿದರೆ, ಅದ್ಭುತವಾದ ಪ್ರೀತಿಯಿಂದ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದರೆ, ಅವರು ಪ್ರತಿಕ್ರಿಯಿಸುತ್ತಾರೆ. ಇದೇ ಕಾರಣದಿಂದಾಗಿಯೇ ಅವರಿಗೆ ಪ್ರಾಣಿಗಳೊಂದಿಗೆ ಮತ್ತು ನಿರ್ಜೀವ ವಸ್ತುಗಳೊಂದಿಗೂ ಸಂವಹನ ಮಾಡಲು ಸಾಧ್ಯವಾಗುತ್ತಿತ್ತು. ಹೊಸ ವಾಹನವನ್ನು ಕೊಂಡು ತಂದಾಗಲೆಲ್ಲಾ ನಾವು ಅದನ್ನು ಇವರ ಬಳಿ ಆಶೀರ್ವಾದ ಪಡೆಯಲು ತರುತ್ತಿದ್ದುದು ನನಗೆ ನೆನಪಿದೆ. ನಾವು ವಾಹನಕ್ಕೆ ಚೈತನ್ಯಗಳನ್ನು ಸಮರ್ಪಿಸುತ್ತಿದ್ದೆವು ಮತ್ತು ಗುರೂಜಿಯವರ ಬಳಿ ವಾಹನವನ್ನು ಚೈತನ್ಯಗೊಳಿಸಲು ವಿನಂತಿಸಿಕೊಳ್ಳುತ್ತಿದ್ದೆವು. ಅಂತಹ ಪ್ರತಿಯೊಂದು ಸಂದರ್ಭದಲ್ಲಿಯೂ ಗುರೂಜಿಯವರು ಆ ವಾಹನದೊಂದಿಗೆ ಮಾತನಾಡುತ್ತಿದ್ದರು ಮತ್ತು ವಾಹನವು ಇಲ್ಲಿ ಇರಲು ಬಹಳ ಸಂತೋಷ ಪಡುತ್ತಿದೆ ಎಂದು ನಮಗೆ ಹೇಳುತ್ತಿದ್ದರು. "ನನ್ನಲ್ಲಿ ಯಾವ ವಿಶೇಷವೂ ಇಲ್ಲ. ನೀವೂ ಕೂಡ ಇದನ್ನು ಮಾಡಬಹುದು," ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಅದು ಅವರ ನಮ್ರತೆ ಎಂದು ನಮಗೆ ಗೊತ್ತು. ಆ ಹಂತಗಳನ್ನು ತಲುಪಲು ನಮ್ಮಲ್ಲಿ ಅದ್ಭುತವಾದ ಪ್ರೀತಿ ತುಂಬಿರಬೇಕು ಮತ್ತು ನಾವು ಬೃಹತ್ ಪ್ರಯತ್ನಗಳನ್ನು ಮಾಡಬೇಕು. ನಮ್ಮ ಸಾಧನೆಯು ಅಂತಹ ಹಂತವನ್ನು ತಲುಪುವುದೇ ಆಗಿದೆ.

ನಮ್ಮ ನಿರ್ಧಾರಗಳನ್ನು ಮುಂದೂಡಲು, ನಮ್ಮ ಆಯ್ಕೆಗಳನ್ನು ಮುಂದೂಡಲು ನಮಗೆ ಈಗ ಸಮಯ ಇಲ್ಲ ಎಂದು ಅವರು ಹೇಳಿದ್ದರು. ನಾವು ಈಗಲೇ ಆಯ್ಕೆ ಮಾಡಬೇಕು. ನಾವು ಬೆಳಕನ್ನು ಆಯ್ಕೆ ಮಾಡಿಕೊಳ್ಳಬೇಕು ಅಥವಾ ಬೆಳಕನ್ನು ಆಯ್ಕೆ ಮಾಡಿಕೊಳ್ಳಬಾರದು. ನಾವು ಈಗಲೇ ಸಂಪೂರ್ಣವಾಗಿ ಪರಿವರ್ತನೆ ಹೊಂದಲು ಸಾಧ್ಯವಾಗದೆ ಇರಬಹುದು. ಅದು ಪರವಾಗಿಲ್ಲ. ನೋಡಿ, ಗುರೂಜಿಯವರು ಎಷ್ಟು ಸುಂದರವಾಗಿ ನಮಗೆ ವಿವರಿಸಿದ್ದಾರೆ. ರಾತ್ರೋರಾತ್ರಿ ನಾವು ಒಬ್ಬ ಋಷಿಯಾಗಬೇಕಿಲ್ಲ. ಅದನ್ನು ನಮ್ಮಿಂದ ನಿರೀಕ್ಷೆ ಮಾಡಿಲ್ಲ. ನಾವು ಪರಿವರ್ತನೆ ಹೊಂದಲು ಕೇವಲ ನಿರ್ಧಾರ ಮಾಡಬೇಕು. ನಾವು ಬೆಳಕನ್ನು ಆಯ್ಕೆ ಮಾಡಿಕೊಳ್ಳಬೇಕು ಅಷ್ಟೆ. ಪರಿವರ್ತನೆ ಒಂದು ಪ್ರಕ್ರಿಯೆ. ಅದು ಸಮಯ ತೆಗೆದುಕೊಳ್ಳುತ್ತದೆ. ಅದು ಅದರದೇ ಸಮಯ ತೆಗೆದುಕೊಳ್ಳಲಿ ಆದರೆ ನಾವು ಈಗ ಸದ್ಯಕ್ಕೆ ಆಯ್ಕೆ ಮಾಡೋಣ. ನಾವು ಆಯ್ಕೆ ಮಾಡಿದರೆ, ಪ್ರಳಯ ಕಾಲದ ಈ ಕಷ್ಟದ ಹಂತ ಕೊನೆಯಾಗಬಹುದು ಎಂದು ನನಗನಿಸುತ್ತದೆ. ಯಾವಾಗ ಬಹು ಪಾಲು ಜನತೆ ಬೆಳಕಿನ ಜೊತೆಗೂಡುತ್ತಾರೋ, ಆಗ ಪ್ರಳಯ ಕಾಲದ ಈ ಕಷ್ಟದ ಹಂತ ಕೊನೆಯಾಗಬಹುದು ಮತ್ತು ಆಗ, ಪ್ರೀತಿ ಮತ್ತು ಶಾಂತಿಯ ಸತ್ಯ ಯುಗದ ರಚನೆ ಆರಂಭವಾಗುತ್ತದೆ. ಈಗ, ಬಹಳಷ್ಟು ಸಮಯ ಮತ್ತು ಶಕ್ತಿಯು, ಒಳಗಿನ ಮತ್ತು ಹೊರಗಿನ ನಕಾರಾತ್ಮಕತೆಯ ವಿರುದ್ಧ ಹೋರಾಡಲು ವ್ಯಯವಾಗುತ್ತಿದೆ. ಒಮ್ಮೆ ನಾವು ಆಯ್ಕೆ ಮಾಡಿದರೆ, ಈ ಹೋರಾಟವು ಕೊನೆಗೊಳ್ಳುತ್ತದೆ. ಅಂತರಾಳದ ಹೋರಾಟವು ಕೊನೆಯಾಗುತ್ತದೆ ಮತ್ತು ಹೊರಗಿನ ಹೋರಾಟವೂ ಕೊನೆಯಾಗುತ್ತದೆ. ನಂತರ, ಸತ್ಯ ಯುಗದ ನಿರ್ಮಾಣ, ಸತ್ಯ ಯುಗದ ನಿರ್ಮಾಣದ ಒಂದು ಸುಂದರ ಪ್ರಕ್ರಿಯೆ ಆರಂಭಗೊಳ್ಳುತ್ತದೆ, ಒಳಗೆ ಮತ್ತು ಹೊರಗೆ. ಆ ಹಂತವನ್ನು ಬೇಗನೆ ತಲುಪುವ ಭರವಸೆ ನನಗಿದೆ.

ಇಂದು, ಹೀಲಿಂಗ್ ಗ್ರೂಪ್‌ಗೆ ಸೇರಲು ಬಯಸಿ ಹೆಸರು ಕೊಟ್ಟವರಿಗೆ, ಹೀಲಿಂಗ್ ಗ್ರೂಪಿನಲ್ಲಿ ಹಾಗೂ ಲೈಟ್ ಚಾನೆಲಿಂಗ್ ಕೆಲಸದಲ್ಲಿ ಮುಂದುವರೆಯಲು ಹೆಸರು ಕೊಟ್ಟವರಿಗೆ ದೀಕ್ಷೆ ಕೊಡಲಾಗುತ್ತದೆ. ಎರಡೂ ಗ್ರೂಪ್‌ಗಳಿಗೂ ದೀಕ್ಷೆ ಕೊಡಲಾಗುತ್ತದೆ. ನಾವು ಗುರೂಜಿಯವರನ್ನು ಪ್ರಾರ್ಥಿಸಿ ಅವರ ಆಶೀರ್ವಾದವನ್ನು ಕೋರೋಣ. ಅವರು ಈ ಗ್ರೂಪ್‌ಗಳಲ್ಲಿ ನಮಗೆ ದೀಕ್ಷೆ ನೀಡುತ್ತಾರೆ.

ಹೀಲಿಂಗ್ ಅನ್ನು ವಿವೇಚನೆಯಿಂದ ಮಾಡಬೇಕು. ನಾವು ಎಲ್ಲರನ್ನೂ ಹೀಲ್ ಮಾಡಲು ಇಚ್ಛಿಸುತ್ತೇವೆ ಆದರೆ ನಾವು ಅದರ ಬಗ್ಗೆ ವಾಸ್ತವಿಕತೆ ಹೊಂದಿರಬೇಕು. ಹೀಲಿಂಗ್ ಒಂದು ಉದಾತ್ತ ಮತ್ತು ಗಂಭೀರ ಕಾರ್ಯ. ನಾವು ಹೀಲ್ ಮಾಡುವ ವ್ಯಕ್ತಿಯ ಕರ್ಮದ ಕೊಂಚ ಭಾಗವನ್ನು ನಾವು ತೆಗೆದುಕೊಳ್ಳುವ ಅಗತ್ಯವಿದೆ. ಧ್ಯಾನದ ಮೂಲಕ ಅದನ್ನು ನಿವಾರಿಸಿಕೊಳ್ಳಬಹುದು ಆದರೆ ನಮ್ಮ ಸಾಮರ್ಥ್ಯಗಳು ಸೀಮಿತವಾದದ್ದು. ನಾವು ಇದರ ಬಗ್ಗೆ ಬಹಳ ವಾಸ್ತವವಾಗಿರಬೇಕು. ನಾವು ಪ್ರಪಂಚದಲ್ಲಿರುವವರೆಲ್ಲರನ್ನೂ ಗುಣ ಮಾಡಲು ಆಗುವುದಿಲ್ಲ. ಅದು ಸಾಧ್ಯವಿಲ್ಲ. ಅದರ ಬದಲಾಗಿ ನಾವು ಲೈಟ್ ಚಾನೆಲ್ ಮಾಡೋಣ. ನಾವು ಲೈಟ್ ಚಾನೆಲ್ ಮಾಡಿದಾಗ, ಆ ಬೆಳಕು ಹೀಲಿಂಗ್ ಶಕ್ತಿಗಳನ್ನು ಹೊಂದಿರುತ್ತದೆ. ಅದು ಅವರಿಗೆ ತಲುಪುತ್ತದೆ. ■

## ಪ್ರಶ್ನೋತ್ತರಗಳು

**ಜಯಂತ್ ದೇಶ್‌ಪಾಂಡೆ**

**ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ**

**ಪ್ರ: ನಕಾರಾತ್ಮಕ ವ್ಯಕ್ತಿಗಳಿಂದ ನಾವು ಅಂತರವನ್ನು ಕಾಯ್ದುಕೊಳ್ಳಬೇಕೇ?**

ಉ: ಮೊದಲನೆಯದಾಗಿ, ಒಬ್ಬ ವ್ಯಕ್ತಿಯನ್ನು ನಕಾರಾತ್ಮಕ ವ್ಯಕ್ತಿಯೆಂದು ನಾವು ಹೇಗೆ ನಿರ್ಧರಿಸುತ್ತೇವೆ? ಅದು ಸಾಧ್ಯವಾದರೆ, ಆಗ ನಾವು ಅಂತರವನ್ನು ಕಾಯ್ದುಕೊಳ್ಳಬಹುದು. ಆದರೆ ಕೆಲವೊಮ್ಮೆ ಅದು ಸಾಧ್ಯವಾಗುವುದಿಲ್ಲ. ಪ್ರತಿಬಾರಿಯೂ ಅದು ಕಾರ್ಯತಃ ಸಾಧ್ಯವಾಗುವುದಿಲ್ಲ. ನಾವು ಸ್ವತಃ ಗುರೂಜಿಯವರಿಂದ ಕೇಳಿಸಿಕೊಂಡಿದ್ದೇವೆ – ನಮ್ಮೊಳಗೆ ಬೆಳಕನ್ನು ತುಂಬಿಕೊಂಡು, ವ್ಯಕ್ತಿಯ ಬೆಳಕಿನ ಜೊತೆಗೆ ಸಂಪರ್ಕ ಹೊಂದಿ ಆ ವ್ಯಕ್ತಿಯ ಜೊತೆಗೆ ಮಾತನಾಡಬಹುದು, ಮತ್ತು ಆತನ ಅಥವಾ ಆಕೆಯ ಸಕಾರಾತ್ಮಕ ಅಂಶಗಳೊಂದಿಗೆ ಸಂಪರ್ಕ ಪಡೆದುಕೊಳ್ಳಲೂ ಪ್ರಯತ್ನಿಸಬಹುದು. ಪ್ರತಿ ವ್ಯಕ್ತಿಯಲ್ಲಿಯೂ ಸಕಾರಾತ್ಮಕತೆ ಮತ್ತು ನಕಾರಾತ್ಮಕತೆಗಳು ಸ್ವಲ್ಪ ಪ್ರಮಾಣದಲ್ಲಿ ಇದ್ದೇ ಇರುತ್ತವೆ. ಪ್ರತಿಯೊಬ್ಬರೂ ಸಂಪೂರ್ಣವಾಗಿ ನಕಾರಾತ್ಮಕ ವ್ಯಕ್ತಿಯಾಗಿರುವುದಿಲ್ಲ. ಪ್ರತಿಯೊಬ್ಬರಲ್ಲಿಯೂ ದೈವತ್ವ ಇರುತ್ತದೆ. ನಾವು ಆ ದೈವತ್ವದ ಭಾಗದೊಂದಿಗೆ ಸಂಪರ್ಕ ಪಡೆದುಕೊಳ್ಳುವುದಕ್ಕೆ ಪ್ರಯತ್ನಿಸಬಹುದು. ಅಂತರ ಕಾಯ್ದುಕೊಳ್ಳುವುದು ಒಳ್ಳೆಯದೇ, ಆದರೆ ತೀವ್ರವಾಗಿ ಇಷ್ಟಪಡದಿರುವುದು, ದ್ವೇಷಿಸುವುದು – ಇವು ಯಾವುವೂ ನಮಗೆ ಸಹಾಯ ಮಾಡುವುದಿಲ್ಲ. ನಮ್ಮಲ್ಲಿ ಪ್ರೀತಿಯನ್ನು ಹೊಂದಿರಲು ಸಾಧ್ಯವಾದರೆ, ಈ ನಮ್ಮ ಪ್ರೀತಿ ಆ ವ್ಯಕ್ತಿಯ ದೈವತ್ವದೊಂದಿಗೆ ಸಂಪರ್ಕ ಪಡೆದುಕೊಳ್ಳುತ್ತದೆ, ಆ ನಂತರ ಯಾವ ಸಮಸ್ಯೆಯೂ ಇರುವುದಿಲ್ಲ.

**ಪ್ರ: ನಕಾರಾತ್ಮಕತೆಯಿಂದ ತುಂಬಿರುವ ಸ್ಥಳಗಳಿಗೆ ಹೋಗುವುದರಿಂದ ನಮ್ಮ ಮೇಲೆ ಪರಿಣಾಮ ಉಂಟಾಗುತ್ತದೆಯೇ?**

ಉ: ಇದು ನಮ್ಮನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ನಕಾರಾತ್ಮಕತೆಯಿಂದ ತುಂಬಿರುವ ಸ್ಥಳಗಳಿಗೆ ನಾವು ಹೋಗುವುದಿಲ್ಲ. ಆದರೆ ಕೆಲವೊಂದು ಕಾರಣದಿಂದಾಗಿ ನಾವು ಅಂತಹ ಸ್ಥಳಕ್ಕೆ ಹೋಗಲೇಬೇಕಾದ ಸಂದರ್ಭ ಬಂದರೂ, ನಕಾರಾತ್ಮಕತೆಯಿಂದ ಪ್ರಭಾವಿತರಾಗಬೇಕೆಂಬ ಅವಶ್ಯಕತೆ ಇಲ್ಲ. ನಾವು ಬಲಿಷ್ಠರಾಗಿರಬೇಕು. ನಾವು ಬಲಿಷ್ಠರಾಗಿದ್ದರೆ ಅದರ ಪರಿಣಾಮಕ್ಕೊಳಗಾಗುವುದಿಲ್ಲ. ನಾವು ಗಾಢವಾಗಿ ನಮ್ಮ ಗುರಿಯೊಂದಿಗೆ ಶ್ರುತಿಗೊಂಡಿದ್ದಾದರೆ, ನಮ್ಮ ಗುರಿಯನ್ನು ತಲುಪಲು ನಮಗೆ ಸಹಾಯಮಾಡುವಂತಹ ಸ್ಥಳಗಳಿಗೇ ನಾವು ಸೆಳೆಯಲ್ಪಡುತ್ತೇವೆ. ಇದು ತಾನಾಗಿಯೇ ನಡೆಯುತ್ತದೆ. ಆಧ್ಯಾತ್ಮಿಕವಾಗಿ ಬೆಳೆಯುವುದೇ ನಮ್ಮ ಗುರಿಯಾಗಿದ್ದರೆ, ಸಹಜವಾಗಿಯೇ ಸಕಾರಾತ್ಮಕ ಸ್ಥಳಗಳಿಗೆ, ಸಕಾರಾತ್ಮಕತೆಯಿಂದ ಕೂಡಿದ ಜನರ ಕಡೆಗೆ ಸೆಳೆಯಲ್ಪಡುತ್ತೇವೆ. ಬಹುಶಃ, ನಮ್ಮನ್ನು ಪರೀಕ್ಷೆಗೆ ಒಡ್ಡುವ ಸಲುವಾಗಿ, ಈ ವ್ಯಕ್ತಿ ಹೇಳುವ ಹಾಗೆ, ನಕಾರಾತ್ಮಕತೆಯಿಂದ ತುಂಬಿರುವ ಸ್ಥಳದಲ್ಲಿ ಇರಬೇಕಾದ ಸಂದರ್ಭ ನಮಗೆ ಒದಗಿಬರಬಹುದು. ಆದರೆ ಬೆಳಕಿನ ಜೊತೆಗೆ ನಮಗಿರುವ ಸಂಬಂಧ ನಾವು ನಕಾರಾತ್ಮಕತೆಗೆ ಒಳಗಾಗದಂತೆ ನೋಡಿಕೊಳ್ಳುತ್ತದೆ. ನಾವು ಬಲಿಷ್ಠರಾಗಿ ಬೆಳೆಯುವುದೇ ನಮಗಿರುವ ಏಕೈಕ ಮಂತ್ರ. ಬಲಿಷ್ಠರಾಗಿ ಬೆಳೆಯುವುದಕ್ಕಾಗಿ ನಾವು ಧ್ಯಾನ ಮಾಡಬೇಕು, ಆಧ್ಯಾತ್ಮಿಕತೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ಬೆಳಕಿನೊಂದಿಗೆ ಶ್ರುತಿಗೊಳ್ಳಬೇಕು. ನಕಾರಾತ್ಮಕತೆಯನ್ನು ನಿಭಾಯಿಸಲು ಇದೇ ಅತ್ಯುತ್ತಮ ದಾರಿ.


**ಪ್ರ: ದುರ್ಬಲ ವ್ಯಕ್ತಿಯ ಶಾಪ ಪ್ರಭಾವಶಾಲಿಯೇ? ದುರ್ಬಲನಾಗಿರುವ ವ್ಯಕ್ತಿಯೊಬ್ಬನು ನಮ್ಮನ್ನು ಶಪಿಸಿದರೆ, ಆ ಶಾಪ ನಮ್ಮ ಮೇಲೆ ಪ್ರಭಾವ ಬೀರುತ್ತದೆಯೇ?**

ಉ: ನಾನು ಅರ್ಥಮಾಡಿಕೊಂಡಿರುವಂತೆ, ವ್ಯಕ್ತಿಯೊಬ್ಬನಲ್ಲಿರುವ ದುರುದ್ದೇಶವೇ ಶಾಪ, ಉದಾಹರಣೆಗೆ ನನಗೇನಾದರೂ ಕೆಟ್ಟದಾಗಬೇಕೆಂಬ ಉದ್ದೇಶ. ನನಗೆ ಅನ್ನಿಸುವಂತೆ ದುರ್ಬಲ ವ್ಯಕ್ತಿಕೂಡ ಪ್ರಬಲ ಉದ್ದೇಶ ಹೊಂದಿರಬಲ್ಲ. ವ್ಯಕ್ತಿಯೊಬ್ಬನು ಪ್ರಬಲನೋ ಅಥವಾ ದುರ್ಬಲನೋ ಅನ್ನುವುದು ಅಷ್ಟೊಂದು ಮುಖ್ಯವಲ್ಲ ಆದರೆ ಅವನ ಭಾವನೆ ಎಷ್ಟು ತೀವ್ರವಾಗಿದೆ ಎನ್ನುವುದು ಮುಖ್ಯವಾಗುತ್ತದೆ. ಹಾಗೆಯೇ, ಶಪಿಸಿದ ವ್ಯಕ್ತಿಗೆ ಅನ್ಯಾಯವಾಗಿದೆಯೇ ಎನ್ನುವ ವಿಷಯ ಕೂಡ ಇದರಲ್ಲಿ ಪಾತ್ರವಹಿಸುತ್ತದೆ. ಬೇರೆ ವ್ಯಕ್ತಿಯ ಹಾರೈಕೆ ಅಥವ ಉದ್ದೇಶದಲ್ಲಿ ಚೈತನ್ಯವಿರುತ್ತದೆ. ಈ ಚೈತನ್ಯವನ್ನು ನಮ್ಮೆಡೆಗೆ ಹರಿಸಲಾಗುತ್ತದೆ. ನನಗೆ ಅನ್ನಿಸುವಂತೆ, ನಾವು ಆಧ್ಯಾತ್ಮಿಕವಾಗಿ ಬಲಿಷ್ಠರಾಗಿದ್ದರೆ, ನಾವು ರಕ್ಷಾ ಕವಚವನ್ನು ಹೊಂದಿರುತ್ತೇವೆ ಮತ್ತು ಈ ಚೈತನ್ಯಗಳಿಗೆ ನಮ್ಮ ಮೇಲೆ ಪ್ರಭಾವ ಬೀರಲು ಸಾಧ್ಯವಾಗುವುದಿಲ್ಲ. ನಾನು ಅರ್ಥಮಾಡಿಕೊಂಡಿರುವಂತೆ, ವ್ಯಕ್ತಿಯ ಶಾಪವೂ ಸಹ ವಿಶ್ವದ ಒಪ್ಪಿಗೆಯನ್ನು ಪಡೆದುಕೊಂಡಿರಬೇಕು. ವಿಶ್ವವ್ಯಾಪಿ ನ್ಯಾಯದ ಜೊತೆಗೆ ಶ್ರುತಿಗೊಂಡಿರದಿದ್ದರೆ, ವ್ಯಕ್ತಿ ಬಯಸಿದಂತೆ ಸಂಪೂರ್ಣವಾಗಿ ಅಭಿವ್ಯಕ್ತಗೊಳ್ಳಲಾರದು. ಅದಕ್ಕೆ ದೇವರ ಒಪ್ಪಿಗೆ ಬೇಕು. ಧ್ಯಾನಿಗಳಾದ ನಾವು ಇಂತಹ ಸಂಗತಿಗಳಿಗೆ ಚಿಂತೆ ಮಾಡಬಾರದು. ಸಾಮಾನ್ಯವಾಗಿ ಯಾರು ಇಂತಹ ದುಷ್ಟ ಉದ್ದೇಶಗಳನ್ನು ಹೊಂದಿರುತ್ತಾರೋ ಅವರು ತಮ್ಮ ಕೃತ್ಯಗಳ ಮೂಲಕ ಅವರ ವರ್ತನೆಗಳ ಮೂಲಕ ಈ ಉದ್ದೇಶಗಳನ್ನು ಅಭಿವ್ಯಕ್ತಿಸುತ್ತಾರೆ. ಇವು ಮಾನವ ಮಟ್ಟದಲ್ಲಿ ನಮಗೆ ತೊಂದರೆಯನ್ನುಂಟು ಮಾಡುತ್ತವೆ. ಅದನ್ನು ನಮ್ಮದೇ ರೀತಿಯಲ್ಲಿ ನಾವು ನಿಭಾಯಿಸಬೇಕು. ಇದಕ್ಕೆ ಉತ್ತಮ ದಾರಿಯೆಂದರೆ ಅಂತಹ ಜನರ ಬಗ್ಗೆ ಕನಿಕರ ಹೊಂದಿದ್ದು ಪ್ರೀತಿಯಿಂದಲೇ ವರ್ತಿಸುವುದು. ■

### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 & 4 | each 200/- |
| Thus Spoke Guruji Krishnananda - Vol 2 & 3 | each 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KRNA/BGE/1124/ 2020-2022
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ನನ್ನ ಪ್ರತಿ ಹೆಜ್ಜೆಯಲ್ಲೂ ಭಗವಂತನ/ಗುರುವಿನ ಇರುವಿಕೆ ತಿಳಿಯುತ್ತಿದೆ. ಈಗ ನನ್ನನ್ನು ಆವರಿಸಿರುವ ನಿರ್ಲಿಪ್ತತೆ, ಪ್ರಶಾಂತತೆ ಹಾಗೂ ಶರಣಾಗತಿಯ ಅರಿವಾಗುತ್ತಿದೆ. ನನ್ನ ಅಂತರಂಗದಲ್ಲಿ ಮೌನ ಹೆಚ್ಚಾಗಿದೆ ಮತ್ತು ಏಕಾಗ್ರತೆಯಿಂದ ಗಮನ ಹರಿಸಬಲ್ಲೆ. ನನ್ನ ಪೂಜಾಗೃಹದಲ್ಲಿ ಮೌನವಾಗಿ ಕುಳಿತು ಧ್ಯಾನಮಾಡಲು ನನಗೆ ಇಷ್ಟ.

– ರೆಬೋನಿ ರಾಯ್

ಇಂದಿನ ಜೀವನದ ಪರಿಸ್ಥಿತಿಯು ಸವಾಲೇ ಆದರೂ, ಆತಂಕವಿಲ್ಲದೇ ಅವುಗಳನ್ನು ನಿರ್ವಹಿಸಲು ಧ್ಯಾನ ಸಹಾಯ ಮಾಡುತ್ತಿದೆ. ಭಾನುವಾರಗಳಂದು ಗುರೂಜಿಯವರು ನನ್ನೆಲ್ಲಾ ಪ್ರಶ್ನೆಗಳಿಗೂ ಉತ್ತರಿಸುತ್ತಾರೆ ಎಂದೆನಿಸುತ್ತದೆ.

– ನಿತ್ಯಾ ನಟರಾಜನ್

ಇದುವರೆಗಿನ ಓರಿಯೆಂಟೇಶನ್ ತರಗತಿಗಳಿಗಿಂತ ಈ ಸಲದ ತರಗತಿಯ ಅನುಭವ ಸಂಪೂರ್ಣವಾಗಿ ಭಿನ್ನವಾಗಿತ್ತು. ಸೂರ್ಯ ಧ್ಯಾನಕ್ಕೆ ಕುಳಿತಾಗ, ಸೂಕ್ಷ್ಮ ಚೈತನ್ಯಗಳು ನನ್ನ ದೇಹವನ್ನು ಪ್ರವೇಶಿಸಿ ಇಡೀ ಶರೀರವನ್ನು ಆಕ್ರಮಿಸಿಕೊಂಡ ಅನುಭವವಾಯಿತು. ಕಲ್ಕಿ ದೇವರ ಚೈತನ್ಯದ ಅನುಭವ ಬಹಳ ಸುಂದರವಾಗಿತ್ತು. ನನ್ನ ಚೈತನ್ಯ ಮತ್ತು ಭೌತಿಕ ದೇಹದ ಸುತ್ತಲೂ ನಿರಂತರ ಸುಳಿಯಂತೆ ಹೊಂಬಣ್ಣದ ಚೈತನ್ಯವು ಮೂಡುತ್ತಿದ್ದ ಅನುಭವವಾಯಿತು. ನನಗೆ ಎಲ್ಲ ಮಟ್ಟಗಳಲ್ಲೂ ರಕ್ಷಣೆ ಸಿಗುತ್ತಿದ್ದುದರ ಅನುಭವವಾಯಿತು.

ರಾ ಧ್ಯಾನ ಮಾಡುತ್ತಿದ್ದಾಗ, ನನ್ನ ಅರಿವೇ ಇಲ್ಲವಾಗಿ ನಾನೊಂದು ಬೆಳಕಾಗಿದ್ದೆ. ಇಲ್ಲಿಯವರೆಗೂ ಆದ ಎಲ್ಲಾ ಅನುಭವಗಳಿಗಿಂತ ಇದೊಂದು ಗಾಢವಾದ ಅನುಭವ. ಆನಂದವನ್ನು ಅನುಭವಿಸುವ ಮತ್ತು ಹರಡುವ ತಂತ್ರವನ್ನು ಪ್ರಾರಂಭಿಸಿದಾಗ ಆಳವಾದ ನಿಶ್ಚಲತೆಯ ಅನುಭವವಾಯಿತು. ನನ್ನ ಉಸಿರಾಟ ಕೂಡ ತಿಳಿಯಲಿಲ್ಲ. ನನ್ನ ಎದೆಯ ಮಧ್ಯದಲ್ಲಿ ಬುದ್ಧನ ಆಕೃತಿಯನ್ನು ಕಂಡೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಓರಿಯೆಂಟೇಶನ್ ತರಗತಿಯು ನನಗೆ ಇನ್ನೂ ಹೆಚ್ಚು ಬಲವಾದ ಆಧಾರವನ್ನು ತಂದುಕೊಟ್ಟಿತು.

– ಜಸ್ ಭಾಟಿಯಾ

ಮಹರ್ಷಿ ಅಮರರವರೇ ಓರಿಯೆಂಟೇಶನ್ ತರಗತಿಯನ್ನು ನಡೆಸುತ್ತಿದ್ದರು. ಅವರನ್ನು ಬಿಟ್ಟು ಬೇರೆ ಯಾರೂ ನನಗೆ ಕಂಡುಬರಲಿಲ್ಲ, ಆದರೆ ಧ್ವನಿ ಮಾತ್ರ ಜಯಂತ್ ಸರ್ ಅವರದಾಗಿತ್ತು. ಇದು ತರಗತಿಯ ಕೊನೆಯ ಅಭ್ಯಾಸದವರೆಗೂ ಮುಂದುವರೆಯಿತು. ಆ ನಂತರ ಜಯಂತ್ ಸರ್ ಅವರು ತರಗತಿಯನ್ನು ನಡೆಸುವುದನ್ನು ನೋಡಿದೆ. ಬಹುಶಃ ತಾಂತ್ರಿಕ ತೊಂದರೆಯಿದ್ದರಿಂದ, ಸಹಾಯ ಮಾಡಲು ಮಹರ್ಷಿ ಅಮರರವರು ಬಂದಿರಬಹುದು.

ಒಂದು ವೈಜ್ಞಾನಿಕ ಪುಳಕ – ಓರಿಯೆಂಟೇಶನ್ ತರಗತಿಯು ಪ್ರಾರಂಭವಾಗುವುದಕ್ಕೆ ಮುಂಚೆ, ಸರಿಯಾಗಿ 11 ಗಂಟೆಯಲ್ಲಿ ಆಕ್ಸೀಮೀಟರ್‌ನಲ್ಲಿ ನನ್ನ ನಾಡಿಯನ್ನು ಪರೀಕ್ಷಿಸಿದೆ. ನನ್ನ ಆಕ್ಸಿಜನ್ ರೀಡಿಂಗ್ 98 ಇತ್ತು ಮತ್ತು ನಾಡಿ ಬಡಿತ 84 ಇತ್ತು. ತರಗತಿಯ ನಂತರ 1.30ರ ಸಮಯದಲ್ಲಿ ಮತ್ತೊಮ್ಮೆ ಪರೀಕ್ಷಿಸಿದಾಗ ನನ್ನ ಆಕ್ಸಿಜನ್ ರೀಡಿಂಗ್ 100 ಮತ್ತು ನಾಡಿ 64 ಇತ್ತು!

ನನಗೆ ಮೊಟ್ಟಮೊದಲ ಬಾರಿಗೆ ಮಹರ್ಷಿ ಅಮರಾಜಿಯವರನ್ನು ನೋಡಲು ಸಾಧ್ಯವಾದ ಈ ತರಗತಿಗೆ ನನ್ನ ವಂದನೆಗಳು.

– ನಂದಿತಾ ವಿಜಯನ್

ಒಂದು ಸಂಜೆ ಕೃಷ್ಣ ಭಗವಂತನು ಆಕಾಶದಿಂದ ನಡೆದು ಬಂದು ನಮ್ಮ ಮನೆಯ ಬಾಗಿಲಿನ ಮುಂದೆ ನಿಂತಿದ್ದನ್ನು ಕಂಡೆ. ಕೆಲವೇ ಕ್ಷಣಗಳಲ್ಲಿ ಸುತ್ತಮುತ್ತಲಿನ ಎಲ್ಲವೂ ಬೆಳಕಾಗಿ ಬದಲಾಯಿತು. ನನ್ನ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ನಾನು ಓಡಿಹೋಗಿ ಅವನನ್ನು ಅಪ್ಪಿಕೊಂಡೆ. ನಾನು ಅವನಲ್ಲಿ ಒಂದಾದೆ. ಮತ್ತೆ ಈ ಜೀವನಕ್ಕೆ ಹಿಂತಿರುಗಲು ನನಗೆ ಇಷ್ಟವಾಗಲಿಲ್ಲ. ಆ ಅನುಭವ ಅಷ್ಟೊಂದು ಗಾಢವಾಗಿತ್ತು. ನನಗೆ ಬೇರೇನೂ ಬೇಕೆನಿಸಲಿಲ್ಲ. ಅವನು ನನಗೆ ಪಂಢರಾಪುರದ ಪಾಂಡುರಂಗನ ದರ್ಶನ ಭಾಗ್ಯವನ್ನು ಕರುಣಿಸಿದ. ಪಂಢರಾಪುರದ ದೇವಸ್ಥಾನದ ಗರ್ಭಗುಡಿಯಲ್ಲೇ ನಾನು ಇದ್ದಂತೆ ಭಾಸವಾಯಿತು. ನಂತರ ಆಕಾಶದೆಡೆಗೆ ತನ್ನ ಕೈಬೀಸಿ ಸುಂದರವಾದ ಮತ್ತು ಭವ್ಯವಾದ ಸೂರ್ಯೋದಯದ ದೃಶ್ಯವನ್ನು ತೋರಿಸಿದ. ಸೂರ್ಯ ಕಿರಣಗಳು ಹೊರಬಂದು ನಮ್ಮ ಭೂಮಿಯನ್ನು ಆವರಿಸಿದ್ದನ್ನು ಕಂಡೆ. "ನೀನು ಬೇಸರಿಸಬೇಡ. ಈ ಸುಂದರವಾದ ಭವಿಷ್ಯ ಬರುತ್ತದೆ," ಎಂದು ಕೃಷ್ಣ ಪರಮಾತ್ಮನು ಹೇಳಿದ. ಅವನು ಬೆಳಕಿನ ರೂಪದಲ್ಲಿ ವಿಸ್ತರಿಸುತ್ತಾ ಹೋದ. ಅವನನ್ನು ಮತ್ತು ಬೆಳಕನ್ನು ಸಂಪೂರ್ಣವಾಗಿ ಅನುಭವಿಸಿದೆ. ನಾನು ಕಂಡ ಸೂರ್ಯೋದಯವು ಶೀಘ್ರದಲ್ಲೇ ಬರುತ್ತಿರುವ ಸತ್ಯಯುಗದ ಸಂಕೇತವೆನಿಸಿತು. ಎಲ್ಲೆಲ್ಲೂ ವಿಠೋಬನನ್ನು ಕಾಣುವುದು ಬಹಳ ಸಂತಸ ತಂದಿದೆ. ನಮ್ಮ ಮನೆಯ ಪ್ರತಿಯೊಂದು ಕಣಕಣದಲ್ಲೂ ಅವನೇ ಇರುವನೆಂದು ತೋರುತ್ತಿದೆ.

– ರಾಖೀ ಚೋಪ್ರ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ